KARNATAKA LOKAYUKTA

No.UPLOK-1/DE.453/2016/ARE-14

Multi Storied Building,
Dr. B.R. Ambedkar Veedhi,
Bengaluru-560 001.
Dated 23.11.2022.

## RECOMMENDATION

Sub:- Departmental inquiry against Sri Chethan.S.Kolavi, the then Chief Officer, Town Municipality, Ullala, Mangaluru Taluk,– reg.

Ref:- 1) Government Order No. UDD 74 DMK 2016 dated 26.09.2016.

2) Nomination order No. UPLOK-1/DE.453/2016 dated 06.10.2016 of Hon'ble Upalokayukta, State of Karnataka.

3) Inquiry report dated 21.11.2022 of Additional Registrar of Enquiries-14, Karnataka Lokayukta, Bengaluru.

~~~~~~

The Government by its order dated 26.09.2016 initiated the disciplinary proceedings against Sri Chethan.S.Kolavi, the then Chief Officer, Town Municipality, Ullala, Mangaluru Taluk, [hereinafter referred to as Delinquent Government Official, for short as ' DGO '] and entrusted the Departmental Inquiry to this Institution.
~~~~~~

2. This Institution by Nomination Order No. UPLOK-1/DE.453/2016 dated 06.10.2016 nominated Additional Registrar of Enquiries-1, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by him. Subsequently, the matter was transferred to ARE-7 and then to the Additional Registrar of Enquiries-14 to continue the said inquiry.

3. The DGO was tried for the charge of demanding and accepting bribe of Rs. 50,000/- from the complainant for issuing him cheques towards the work of desilting of drains carried out by the complainant being Civil Contractor and thereby committing misconduct.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the Disciplinary Authority has '*proved*' the above charge against the DGO Sri Chethan.S.Kolavi, the then Chief Officer, Town Municipality, Ullala, Mangaluru Taluk.

5. On perusal of the entire materials on record, in order to prove the misconduct of the DGO, the Disciplinary Authority has examined three witnesses as PW-1 to PW-3 and got marked documents Ex. P-1 to P-17. The DGO neither got examined himself nor any witnesses on his behalf, but got marked documents Ex.D.1 to D-3 through the complainant PW.1. The materials on record show that, the DGO, for the purpose of issuing cheques towards the work got executed by complainant, demanded and accepted a sum of Rs.50,000/- on the date of the trap. Though the DGO has denied receipt of any bribe, the entire evidence discloses that, DGO has demanded and accepted a sum of Rs.50,000/- from the complainant. Therefore, there is no reason to deviate from the opinion expressed by the Inquiry Officer. Hence, it is hereby recommended to the Government to accept the report of Inquiry Officer.

6. As per the First Oral Statement of the DGO, DGO Sri Chethan.S.Kolavi, is due to retire from service on 28.02.2040.

7. Having regard to the nature of charge (demand and acceptance of bribe) 'proved' against the DGO and considering the totality of circumstances, it is hereby recommended to the Govt. to impose penalty of 'compulsory retirement on DGO Sri Chethan.S.Kolavi, the then Chief Officer, Town Municipality, Ullala, Mangaluru Taluk.'

8. Action taken in the matter shall be intimated to this Authority.

Connected records are enclosed herewith.

23/11/22

**(JUSTICE K.N.PHANEENDRA)**
Upalokayukta,
State of Karnataka.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿಇ-453/2016/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 21/11/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌಕರ ಶ್ರೀ. **ಚೇತನ್ ಎಸ್. ಕೊಳವಿ,** ಹಿಂದಿನ ಮುಖ್ಯಾಧಿಕಾರಿ, ಪುರಸಭೆ, ಉಲ್ಲಾಳ, ಹಾಲಿ ಮುಖ್ಯಾಧಿಕಾರಿ ಗ್ರೇಡ್-2, ಪುರಸಭೆ, ಜಿಗಣಿ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಎಂವೈಎಸ್/496/2016/ಎ.ಆರ್.ಇ-7 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 08/07/2016.
2. ಸರ್ಕಾರದ ಆದೇಶ ಸಂಖ್ಯೆ: ನಅಇ 74 ಡಿಎಂಕೆ 2016, ಬೆಂಗಳೂರು, ದಿನಾಂಕ: 26/09/2016.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/453/2016, ಬೆಂಗಳೂರು ದಿನಾಂಕ: 06/10/2016.
4. Order No.UPLOK-1/DE/2017 Bengaluru Dated 4.7.2017 file transferred from ARE-1 to ARE-7.
5. Order No.UPLOK-1 & 2/DE/transfers/ 2018, Bengaluru, Dated 06/08/2018 file transferred from ARE-7 to ARE-14.

* * * * * *

ಮಾನ್ಯ ಅಪರ ಪೋಲಿಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಮಂಗಳೂರು ಲೋಕಾಯುಕ್ತ ಪೋಲಿಸ್ ನಿರೀಕ್ಷಕರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ

ದಾಖಲೆಗಳೊಂದಿಗೆ ಸಲ್ಲಿಸಿದ್ದ ವರದಿಯಲ್ಲಿ **ಶ್ರೀ. ಚೇತನ್ ಎಸ್. ಕೊಳವಿ,** ಹಿಂದಿನ ಮುಖ್ಯಾಧಿಕಾರಿ, ಪುರಸಭೆ, ಉಲ್ಲಾಳ, ಹಾಲಿ ಮುಖ್ಯಾಧಿಕಾರಿ ಗ್ರೇಡ್–2, ಪುರಸಭೆ, ಜಿಗಣಿ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರ "ಆ.ಸ.ನೌ" ಎಂದು ಕರೆಯಲ್ಪಡುತ್ತಾರೆ) ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ತೋರಿಸಿರುವುದಾಗಿ ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, ಆ.ಸ.ನೌ ರವರು ದುರ್ನಡತೆ ತೋರಿಸಿರುವುದು ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 7(2)ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿರುತ್ತದೆ.

2. ತನಿಖೆ ಪೂರ್ಣಗೊಂಡ ನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 26/09/2016ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 06/10/2016 ರಂದು ಅಪರ ನಿಬಂಧಕರು, ವಿಚಾರಣೆಗಳು–1 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿದ್ದು, ಉಲ್ಲೇಖ (4) ರಂತೆ ಅಪರ ನಿಬಂಧಕರು ವಿಚಾರಣೆಗಳು–1 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು–7 ರವರಿಗೆ ವರ್ಗಾವಣೆಗೊಂಡಿರುತ್ತದೆ. ನಂತರ ಉಲ್ಲೇಖ (5) ಅಪರ ನಿಬಂಧಕರು ವಿಚಾರಣೆಗಳು–7 ರವರಿಂದ ಈ ಕಡತ ಅಪರ ನಿಬಂಧಕರು ವಿಚಾರಣೆಗಳು–14 ರವರಿಗೆ ವರ್ಗಾವಣೆಗೊಂಡಿರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌರವರ ವಿರುದ್ಧ ದೋಷಾರೋಪಣೆ ***(Articles of Charge)*** ಅನ್ನು ಅಪರ ನಿಬಂಧಕರು ವಿಚಾರಣೆಗಳು–1 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ–1 ಮತ್ತು ಅನುಬಂಧ–2 ರೊಂದಿಗೆ ದುರ್ನಡತೆ ಮತ್ತು

ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರಿಗೆ ದಿನಾಂಕ: 24/10/2016 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

**ಅನುಬಂಧ–1**

**ದೋಷಾರೋಪಣೆ**

*You DGO Sri. Chethan S. Kolavi, presently working as Chief Officer Grade-II, TMC, Jigani, Bangalore Rural District, while working as Chief Officer, TMC,Ullala, South Canara District demanded bribe of Rs.80,000/- from complainant Sri. Guruprakash S/o Late Thimmappa, Rama Kerodian Road, Ashoknagar, Mangalore for issue of cheques in respect of the amount due to him for the civil work of desilting of drains in Ullala Town during the year 2012 and 2013 and thereby you committed official misconduct and*

*Further on 13/06/2014 when Lokayukta Police, Mangalore arranged trap and sent said Guruprakash to you along with tainted money, accompanied by a shadow witness, to your house situated at Someshwara Village in Ullala, you again demanded and accepted bribe amount of Rs.50,000/- smeared with phenolphthalein powder and you were caught*

*red-handed and therefore you the DGO has failed to maintain absolute integrity and devotion to duty and committed an act which is unbecoming of a Government Servant and therefore you are guilty of committing misconduct under Rule 3(1)(i) to (iii) of KCS (Conduct) Rules 1996. Hence, this charge.*

## ಅನುಬಂಧ–2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸಕಾಂಡೆಕ್ಟ್)

ಬೆಂಗಳೂರಿನಲ್ಲಿರುವ ಕರ್ನಾಟಕ ಲೋಕಾಯುಕ್ತ ಅಪರ ಪೋಲಿಸ್ ಮಹಾನಿರ್ದೇಶಕರು ತಮ್ಮ ಪತ್ರದೊಂದಿಗೆ ಮಂಗಳೂರು ಕರ್ನಾಟಕ ಲೋಕಾಯುಕ್ತ ಪೋಲಿಸ್ ನಿರೀಕ್ಷಕರು (ಇನ್ನು ಮುಂದೆ "ತನಿಖಾಧಿಕಾರಿ" ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ ಶ್ರೀ. ಚೇತನ್ ಎಸ್. ಕೊಳವಿ ಬಿನ್ ಸದಾಶಿವ ಆರ್. ಕೊಳವಿ, ಮುಖ್ಯಾಧಿಕಾರಿ, ಉಳ್ಳಾಲ ಪುರಸಭೆ, ಮಂಗಳೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರು ಸಾರ್ವಜನಿಕ ನೌಕರರಾಗಿ, ಶ್ರೀ. ಗುರುಪ್ರಕಾಶ್ ಬಿನ್ ದಿ. ಬಿ. ತಿಮ್ಮಪ್ಪ, ರಾಮ ಕಿರೋಡಿಯನ್ ರಸ್ತೆ, ಅಶೋಕನಗರ, ಮಂಗಳೂರು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ಕೆಲಸದ ಸಂಬಂಧ ದುರ್ವರ್ತನೆ/ದುರ್ನಡತೆ ಎಸಗಿದ್ದಾರೆಂದು ವರದಿಯಲ್ಲಿ ತಿಳಿಸಿದ್ದರಿಂದ, ಕರ್ನಾಟಕ ಲೋಕಾಯುಕ್ತ

ಕಾಯ್ದೆ 1984ರ ಕಲಂ 7(2) ರಡಿಯಲ್ಲಿ ಪ್ರದತ್ತವಿರುವ ಅಧಿಕಾರ ಚಲಾಯಿಸಿ, ಎದುರುದಾರರ ವಿರುದ್ಧ ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಲಾಗಿದೆ.

2. ಪ್ರಕಣದ ಸಂಕ್ಷಿಪ್ತ ಸಾರಾಂಶ:–

i. ದೂರುದಾರರಂತೆ:– ದೂರುದಾರರು ಸಿವಿಲ್ ಗುತ್ತಿಗೆದಾರರಾಗಿದ್ದು, ಉಳ್ಳಾಲ ಪುರಸಭೆಯಲ್ಲಿ ಚರಂಡಿಯ ಹೂಳೆತ್ತುವ ಗುತ್ತಿಗೆ ಕೆಲಸವನ್ನು 2012 ರಲ್ಲಿ ಮಾಡಿ ಬಾಬ್ತು ರೂ.10,50,000/– ಹಾಗೂ 2013ನೇ ಸಾಲಿನಲ್ಲಿ ಮಾಡಿದ ಗುತ್ತಿಗೆ ಕೆಲಸದ ಬಾಬ್ತು ರೂ.7,20,000/– ಗಳನ್ನು ದೂರುದಾರರಿಗೆ ಉಳ್ಳಾಲ ಪುರಸಭೆಯಿಂದ ದೊರೆಯಲು ಬಾಕಿಯಿದ್ದು, ಸದರಿ ಮೊತ್ತವನ್ನು ಮಂಜೂರು ಮಾಡುವಂತೆ ಎದುರುದಾರರನ್ನು ಕೋರಿದಾಗ, ಎದುರುದಾರರು ವಿನಾಕಾರಣ ಸತಾಯಿಸಿರುತ್ತಾರೆ.

ii. ಕೊನೆಗೆ ಚೌಕಾಶಿ ಮಾಡಿ ಸದರಿ ರೂ.10,50,000/– ಮೊತ್ತದ ಪೈಕಿ ರೂ.5 ಲಕ್ಷದ ಚೆಕ್ಕನ್ನು ನೀಡಲು ಎದುರುದಾರರು ದೂರುದಾರರಿಗೆ ರೂ.80,000/– ಲಂಚ ನೀಡುವಂತೆ ಒತ್ತಾಯಿಸಿರುತ್ತಾರೆ. ಅದರಂತೆ ದೂರುದಾರರು ಚೆಕ್ ಪಡೆದ ಕೂಡಲೇ ರೂ.50,000/– ನೀಡುವುದಾಗಿಯೂ, ಉಳಿದ ರೂ.30,000/– ಆಮೇಲೆ ನೀಡುವುದಾಗಿ ಒಪ್ಪಿಕೊಂಡಿರುತ್ತಾರೆ. ಈ ಬಗ್ಗೆ ದೂರುದಾರರು ಮೊಬೈಲ್‌ನಲ್ಲಿ ಸಂಭಾಷಣೆಯನ್ನು ಮುದ್ರಿಸಿಕೊಂಡಿರುತ್ತಾರೆ.

iii. ದೂರುದಾರರಿಗೆ ಲಂಚ ಕೊಡಲು ಇಷ್ಟವಿಲ್ಲದ ಕಾರಣ, ದೂರುದಾರರು, ದಿನಾಂಕ: 13/06/2014 ರಂದು ಮಂಗಳೂರು

ಲೋಕಾಯುಕ್ತ ಕಛೇರಿಯಲ್ಲಿ ಹಾಜರಾಗಿ ಎದುರುದಾರರ ವಿರುದ್ಧ ದೂರನ್ನು ದಾಖಲಿಸಿರುತ್ತಾರೆ.

iv. ಅಷ್ಟೇ ಅಲ್ಲದೇ, ದಿನಾಂಕ: 13/06/2014 ರಂದು ಸೋಮೇಶ್ವರ ಗ್ರಾಮದ ಉಳ್ಳಾಲದ ಎದುರುದಾರರ ಮನೆಯಲ್ಲಿ ಎದುರುದಾರರು, ದೂರುದಾರರಿಂದ ರೂ.50,000/- ಫಿನಾಪ್ತಇನ್ ಪೌಡರ್ ಲೇಪಿತ (ಲಂಚದ) ಹಣವನ್ನು ಸ್ವೀಕರಿಸಿರುತ್ತಾರೆ.

v. ಎದುರುದಾರರು ಸದರಿ ದಿವಸ ಆ (ಲಂಚದ) ಹಣದ ಸ್ವಾಧೀನಾನುಭವದಲ್ಲಿರುತ್ತಾರೆ, ತನಿಖಾಧಿಕಾರಿಗಳು ಆ ಹಣದ ಸಹಿತ ಎದುರುದಾರರನ್ನು ಹಿಡಿದಿದ್ದಾರೆ.

vi. ಅದಲ್ಲದೆ, ಸದರಿ ದಿನಾಂಕದಂದು ಆ (ಲಂಚದ) ಹಣವು ಎದುರುದಾರರ ಸ್ವಾಧೀನದಲ್ಲಿ ಹೇಗೆ ಇತ್ತು ಎಂದು ತನಿಖಾಧಿಕಾರಿಗಳೂ ಪ್ರಶ್ನಿಸಿದಾಗ, ಅದಕ್ಕೆ ಎದುರುದಾರರು ಸಮಾಧನಕಾರಕ ಅಥವಾ ಸೂಕ್ತ ಉತ್ತರ ಕೊಡಲು ವಿಫಲರಾಗಿದ್ದಾರೆ.

vii. ಆ ನಂತರ ಆ ಹಣವನ್ನು ಎದುರುದಾರರಿಂದ ತನಿಖಾಧಿಕಾರಿಗಳು ಪಂಚನಾಮೆಯಂತೆ ವಶಪಡಿಸಿಕೊಂಡಿರುತ್ತಾರೆ.

viii. ದೂರುದಾರರು, ಪಂಚರ ಹಾಗೂ ಇತರೆ ಸಾಕ್ಷಿದಾರರ ಹೇಳಿಕೆಗಳನ್ನು ಮತ್ತು ಸಂಬಂಧಿಸಿದ ದಾಖಲೆಗಳು ಪ್ರಕರಣದಲ್ಲಿ ಹಾಜರು ಮಾಡಿದ್ದು, ಅವರು ಕೂಡ ಎದುರುದಾರರು ಪದೇ ಪದೇ ದುರ್ವರ್ಥನೆ/ದುರ್ನಡತೆ ಎಸಗಿರುವುದನ್ನು ತೋರಿಸುತ್ತದೆ.

B.

3. ಆರೋಪ ಪಟ್ಟಿಯಲ್ಲಿ ಕಾಣಿಸಿರುವ ಸಂಗ್ರಹವಾದ ಆಧಾರಗಳಿಂದಾಗಿ ಎದುರುದಾರರು ಅಧಿಕಾರ ಒಲವು ತೋರಲು ಲಂಚದ ಹಣಕ್ಕೆ ಒತ್ತಾಯ ಮಾಡಿ, ಸ್ವೀಕರಿಸಿದ್ದು, ಮೇಲ್ನೋಟಕ್ಕೆ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಸಂಬಂಧ ಮುಂದುವರೆಯುವುದು ಅಗತ್ಯ ಎಂದು ಕಂಡುಬಂದಿದ್ದು, ಎದುರುದಾರರು ಸರ್ಕಾರಿ ಸೇವಕರಾಗಿ ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೇ ಮತ್ತು ಸಾರ್ವಜನಿಕ/ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ವೇದ್ಯವಾಗುತ್ತದೆ.

4. ನಂತರ, ಎದುರುದಾರರಿಗೆ ವೀಕ್ಷಣಾ ಟಿಪ್ಪಣಿಯನ್ನು ಕಳುಹಿಸಿ, ಅವರ ದುರ್ನಡತೆಯ ಬಗ್ಗೆ ಇಲಾಖಾ ವಿಚಾರಣೆ ಕೈಗೊಳ್ಳುವ ಸಂಬಂಧ, ಶಿಸ್ತು ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ವರದಿ ಕಳುಹಿಸಬಾರದು ಎಂಬ ಬಗ್ಗೆ ವಿಚಾರಣೆಯನ್ನು/ಕಾರಣವನ್ನು ಕೇಳಲಾಯಿತು. ಎದುರುದಾರರು ತನಿಖಾ ವರದಿಯಲ್ಲಿ ಕಾಣಿಸಿದ ಸಂಗತಿಗಳನ್ನು ನಿರಾಕರಿಸಿ, ಆಕ್ಷೇಪಣೆಯಲ್ಲಿ ನೀಡಿರುವ ಕಾರಣಗಳಿಗಾಗಿ ತಮ್ಮ ವಿರುದ್ಧದ ತನಿಖೆಯನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ. ಆದರೆ, ಎದುರುದಾರರು ಆಕ್ಷೇಪಣೆಯಲ್ಲಿ ನೀಡಿರುವ ವಿವರಣೆ/ಕಾರಣಗಳು ಸೂಕ್ತ ಅಥವಾ ಸಮಾಧಾನಕರವಾಗಿರುವುದಿಲ್ಲ

5. ಆದ್ದರಿಂದ, ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೇ, ಕರ್ತವ್ಯ ಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ,

ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ, 1966 ರ ನಿಯಮಗಳು 3(1) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿರುತ್ತದೆ.

6. Since said facts and material on record prima-facie show that, the respondent Sri. Chethan S. Kolavi has committed grave misconduct, now, acting under section 12(3) of Karnataka Lokayukta Act, recommendation is made to the Competent Authority to initiate disciplinary proceedings against the respondent for misconduct under Rule 3(1)(i) to (iii) of KCS (Conduct) Rules 1966 the Government after consideration of materials, has entrusted enquiry to Hon'ble Upalokayukta. Hence, the charge.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌರವರು ದಿನಾಂಕ: 10/01/2017 ರಂದು ಹಾಜರಾಗಿದ್ದು, ಆ.ಸ.ನೌ.ರವರ ಪ್ರಥಮ ಮೌಖಿಕ ಹೇಳಿಕೆ, ನಿಯಮ-11 ಕೆ.ಸಿ.ಎಸ್. (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರಿಗೆ ದಾಖಲೆಗಳ ಪರಿಶೀಲನೆಗಾಗಿ ಅವಕಾಶ ಕಲ್ಪಿಸಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌರವರಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು. ಆ.ಸ.ನೌ ರವರು ತಮ್ಮ ಲಿಖಿತ ರಕ್ಷಣಾ ಹೇಳಿಕೆಯಲ್ಲಿ, 2013ನೇ ಸಾಲಿನಲ್ಲಿ

ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಉಳ್ಳಾಲ ಪುರಸಭೆ ಮುಖ್ಯಾಧಿಕಾರಿಯಾಗಿ ದಿನಾಂಕ: 02/09/2013 ರಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ದೂರುದಾರರು 2012 ರಲ್ಲಿ ಉಳ್ಳಾಲ ಪುರಸಭೆ ವ್ಯಾಪ್ತಿಯಲ್ಲಿ ಚರಂಡಿಯ ಹೂಳೆತ್ತುವ ಗುತ್ತಿಗೆ ಕೆಲಸ ನಿರ್ವಹಿಸಿದ ಬಗ್ಗೆ ಅವರಿಗೆ ರೂ.10,50,000/– ಹಣ ಬರುವುದು ಬಾಕಿ ಇತ್ತು ತಾನು ಕರ್ತವ್ಯ ನಿರ್ವಹಿಸಲು ಪ್ರಾರಂಭಿಸಿ ಹಿಂದಿನ ವರ್ಷಕ್ಕೆ ಸಂಬಂಧಿಸಿದಾಗಿದ್ದು, ಈ ಬಗ್ಗೆ ದೂರುದಾರರು ಸಮರ್ಪಕವಾಗಿ ಕಾಮಗಾರಿಯನ್ನು ನಿರ್ವಹಿಸಿರುವ ಬಗ್ಗೆ ಸೂಕ್ತ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಅಲ್ಲದೇ 2013ನೇ ಸಾಲಿಗೆ ಸಂಬಂಧಿಸಿದಂತೆ ಕೈಗೊಂಡಿದ್ದ ಗುತ್ತಿಗೆ ಕಾಮಗಾರಿ ಕೆಲಸವನ್ನು ಸಹ ಸಮರ್ಪಕವಾಗಿ ಪೂರೈಸದೆ ಇರುವ ಕಾರಣ ದೂರುದಾರರು ಬಿಲ್ ಪಾವತಿ ಪಡೆಯಲು ಅರ್ಹರಾಗಿರಲಿಲ್ಲ. ಈ ಸಂಗತಿಯ ಬಗ್ಗೆ ದೂರುದಾರರನ್ನು ವಿಚಾರಿಸಿ ವಿವರಣೆ ಕೇಳಿದ್ದಕ್ಕಾಗಿ, ದೂರುದಾರರು ಆಪಾದಿತರ ಮೇಲೆ ವಿನಾಕಾರಣ ಸಿಟ್ಟಾಗಿ ದ್ವೇಷ ಭಾವನೆ ಹೊಂದಿ ತನಿಖಾಧಿಕಾರಿಗಳ ಜೊತೆಗೆ ಶಾಮೀಲಾಗಿ ಆಪಾದಿತರು ಸುಳ್ಳು ದೂರನ್ನು ಸಲ್ಲಿಸಿರುತ್ತಾರೆ ಅಂತಾ ಹೇಳಿರುತ್ತಾರೆ.

7. ದಿನಾಂಕ: 13/06/2014 ರಂದು ಮಧ್ಯಾಹ್ನ ಇವರು ಮನೆಯಲ್ಲಿದ್ದಾಗ ದೂರುದಾರರು ಮತ್ತೊಬ್ಬ ವ್ಯಕ್ತಿಯೊಂದಿಗೆ ಇವರ ಮನೆಗೆ ಬಂದಿದ್ದು, ದೂರುದಾರರೊಂದಿಗೆ ಮಾತನಾಡುತ್ತಿದ್ದಾಗ ದೂರುದಾರರು ಕುಡಿಯಲು ನೀರು ಕೇಳಿದ ಕಾರಣ ಆಪಾದಿತರು ಮನೆ ಒಳಗೆ ಹೋದಾಗ ದೂರುದಾರರು ಇವರಿಗೆ ಗೊತ್ತಾಗದಂತೆ, ದೂರುದಾರರು ತಂದಿದ್ದ ಹಣದ ಬ್ಯಾಗನ್ನು ಇಟ್ಟು, ಕೂಡಲೇ ಅಲ್ಲಿಯೇ ಬಾಗಿಲು ಬಳಿ ಇದ್ದ ತನಿಖಾಧಿಕಾರಿಗಳನ್ನು ಒಳಗೆ ಕರೆದು ಸುಳ್ಳು ಟ್ರಾಪ್ ಬಲೆಯಲ್ಲಿ ಸಿಲುಕಿಸಿರುತ್ತಾರೆ ಅಂತಾ ಹೇಳಿರುತ್ತಾರೆ.

8. ಈ ಸಮಯದಲ್ಲಿ ದೂರುದಾರರೊಂದಿಗೆ ಇವರ ಮನೆಗೆ ಬಂದಿದ್ದ ಇನ್ನೊಬ್ಬ ವ್ಯಕ್ತಿ ಶ್ರೀ. ರೂಪೇಶ್ ಕಿರಣ ಅಂತಾ ತಿಳಿದು ಬಂದಿದ್ದು, ಸದರಿಯವರು ತನಿಖಾಧಿಕಾರಿಗೆ, ಎದುರುದಾರರು ಯಾವುದೇ ಹಣವನ್ನು ಕೇಳಿಲ್ಲವೆಂದು, ಹಣದ ಬಗ್ಗೆ ಯಾವುದೇ ಮಾತುಕತೆಯಾಗಿಲ್ಲವೆಂದು,

ಎದುರುದಾರರು ನೀರು ತರಲು ಒಳಗೆ ಹೋದಾಗ, ತಂದಿದ್ದ ಬ್ಯಾಗನ್ನು ಆಪಾದಿತರಿಗೆ ತಿಳಿಯದಂತೆ ಎದುರುದಾರರ ಮನೆಯಲ್ಲಿ ಇಟ್ಟಿರುವುದಾಗಿ ತನಿಖಾಧಿಕಾರಿಗೆ ಹಾಗೂ ಅಲ್ಲಿದ್ದ ಎಲ್ಲರಿಗೂ ಹೇಳಿದರೂ ಸಹಿತ, ತನಿಖಾಧಿಕಾರಿಗಳೆ ತಮ್ಮ ಸಿಬ್ಬಂದಿ ಸಹಾಯದಿಂದ ಸ್ವತ್ತು ಸ್ವಾಧೀನತಾ ಮಹಜರನ್ನು ತಯಾರಿಸಿದ್ದು, ಶ್ರೀ. ರೂಪೇಶ್ ಕಿರಣ ಇವರು ಪಂಚನಾಮೆಗೆ ಸಹಿ ಹಾಕಲು ನಿರಾಕರಿಸಿದ್ದು ಅಲ್ಲದೇ ಪಂಚನಾಮೆಗೆ ಸಹಿ ಮಾಡಿರುವುದಿಲ್ಲ. ನಂತರದಲ್ಲಿ ಸದರಿ ಪಂಚನಾಮೆಗೆ ಬೇರೊಬ್ಬರ ಸಹಿ ಪಡೆಯಲಾಗಿದೆ ಅಂತಾ ಹೇಳಿರುತ್ತಾರೆ.

9. ಮುಂದುವರೆದು ದೂರುದಾರರು ಇವರೊಂದಿಗೆ ಫೋನಿನಲ್ಲಿ ಸಂಭಾಷಣೆ ಮಾಡಿರುತ್ತಾರೆ ಮತ್ತು ಹಣದ ಬಗ್ಗೆ ಬೇಡಿಕೆಯನ್ನು ಇಟ್ಟಿರುತ್ತಾರೆ ಎನ್ನುವುದು ಸಹ ಸುಳ್ಳು ಇರುತ್ತದೆ ಅಂತಾ ಹೇಳಿರುತ್ತಾರೆ. ಆದ್ದರಿಂದ, ತಾನು ಯಾವುದೇ ಕರ್ತವ್ಯಲೋಪ ಎಸಗಿರುವುದಿಲ್ಲ ಎಂದು ಹೇಳಿರುತ್ತಾರೆ.

10. ಈ ವಿಚಾರಣೆಯಲ್ಲಿ, ಆ.ಸ.ನೌ.ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.1 ರಿಂದ ನಿ.ಪಿ.7 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಶ್ರೀ. ರೂಪೇಶ ಕಿರಣ ರವರು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ನುಡಿದಿರುತ್ತಾರೆ. ಶ್ರೀ. ನವೀನಚಂದ್ರ ಜೋಗಿ ರವರನ್ನು ಪಿ.ಡಬ್ಲ್ಯೂ.3 ಎಂದು ಸಾಕ್ಷ್ಯ ನುಡಿಸಿಕೊಂಡು, ನಿ.ಪಿ.8 ರಿಂದ 16 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ ರವರು ತಮ್ಮ ಸಾಕ್ಷಿಯನ್ನು ಮಾಡಿಸಿರುವುದಿಲ್ಲ, ಸದರಿಯವರಿಗೆ ಪ್ರಶ್ನಾವಳಿಯನ್ನು ಮಾಡಲಾಗಿದೆ.

11. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು.

12. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

13. ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

14. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಸಕಾರಾತ್ಮಕವಾಗಿ.**
**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

15. ಶಿಸ್ತು ಪ್ರಾಧಿಕಾರ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ನಿ.ಪಿ.1 ರಿಂದ 7 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಳ್ಳಲಾಯಿತು. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಇವರು 15 ವರ್ಷಗಳಿಂದ ಗುತ್ತಿಗೆದಾರರಾಗಿ ಕೆಲಸ ಮಾಡುತ್ತಿದ್ದು, 2012–13ನೇ ಸಾಲಿನಲ್ಲಿ ಉಳ್ಳಾಲ ಪುರಸಭೆ ವ್ಯಾಪ್ತಿಯಲ್ಲಿ ಬೃಹತ್ ಚರಂಡಿಯ ಹೂಳೆತ್ತುವ ಕಾಮಗಾರಿ ಕೆಲಸವನ್ನು ಪಡೆದು, ಕಾಮಗಾರಿಯನ್ನು ಮುಗಿಸಿದ್ದು, ಈ ಕಾಮಗಾರಿಯ ಬಾಬ್ತು ಇವರಿಗೆ ರೂ.10,50,000/– ಗಳ ಒಂದು ಬಿಲ್ಲು ಮತ್ತು ರೂ.7,20,000/–ಗಳ ಇನ್ನೊಂದು ಬಿಲ್ಲಿನ ಹಣ ಬರಲು ಬಾಕಿ ಇತ್ತು. ಮೊದಲಿನ ಮುಖ್ಯಾಧಿಕಾರಿಗಳು ಬಿಲ್ಲನ್ನು ತಯಾರಿಸಿ ವರ್ಗಾವಣೆ ಆಗಿ ಹೋಗಿದ್ದು, ಬಿಲ್ಲಿನ ಹಣ ಪಾವತಿಯಾಗಿರಲಿಲ್ಲ ಅಂತಾ ನುಡಿದಿರುತ್ತಾರೆ.

B

16. ನಂತರ ಆ.ಸ.ನೌ ರವರು ಆ ಸ್ಥಳಕ್ಕೆ ಬಂದಿದ್ದು, ಅವರಿಗೆ ಹಲವು ಬಾರಿ ಭೇಟಿಯಾಗಿ ಬಿಲ್ಲಿನ ಹಣದ ಪಾವತಿಗಾಗಿ ವಿಚಾರಿಸಿದ್ದು, ಅದಕ್ಕೆ ಆ.ಸ.ನೌ ರವರು ರೂ.5 ಲಕ್ಷ ಮಂಜೂರು ಮಾಡಲು ರೂ.80,000/- ಗಳ ಲಂಚದ ಹಣದ ಬಗ್ಗೆ ಬೇಡಿಕೆ ಇಟ್ಟಿದ್ದು, ಆಗ ಇವರು ಮಾತನಾಡಿ ಮೊದಲು ರೂ.50,000/- ಗಳನ್ನು ಕೊಡುವುದಾಗಿ ನಂತರ ರೂ.30,000/- ಗಳನ್ನು ಕೊಡುವುದಾಗಿ ತಿಳಿಸಿರುತ್ತಾರೆ. ದಿನಾಂಕ: 12/06/2014 ರಂದು ಆ.ಸ.ನೌ ರವರೊಂದಿಗೆ ಫೋನಿನಲ್ಲಿ ಮಾತನಾಡಿ ನಾಳೆ ರೂ.50,000/- ಗಳನ್ನು ಕೊಡುತ್ತೇನೆ ಅಂತಾ ತಿಳಿಸಿದ್ದು, ಎಷ್ಟು ಹೊತ್ತಿಗೆ ಎಲ್ಲಿಗೆ ಬರಬೇಕು ಎಂದು ಕೇಳಿದಾಗ, ಈ ಬಗ್ಗೆ ನಾಳೆ ಹೇಳುತ್ತೇನೆ ಅಂತಾ ತಿಳಿಸಿರುತ್ತಾರೆ ಅಂತಾ ನುಡಿದಿರುತ್ತಾರೆ.

17. ಮರುದಿನ ದಿನಾಂಕ: 13/06/2014 ರಂದು ಮಂಗಳೂರಿನ ಲೋಕಾಯುಕ್ತ ಕಛೇರಿಗೆ ಹೋಗಿ ನಿ.ಪಿ.1 ರಂತೆ ಲಿಖಿತ ದೂರನ್ನು ಸಲ್ಲಿಸಿದ್ದು ಹಾಗೂ ಆ.ಸ.ನೌ ರವರ ಜೊತೆಗೆ ಫೋನಿನಲ್ಲಿ ಮಾತನಾಡಿದ ರೆಕಾರ್ಡಿಂಗನ್ನು ಕೊಟ್ಟಿರುತ್ತೇನೆ ಅಂತಾ ನುಡಿದಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚರಾದ ರೂಪೇಶ್ ಮತ್ತು ಸತ್ಯನಾರಾಯಣ ರವರನ್ನು ಕರೆಯಿಸಿ, ಇವರಿಗೆ ಪರಿಚಯಿಸಿರುತ್ತಾರೆ. ಇವರು ರೂ.1000/- ಮುಖ ಬೆಲೆಯ 50 ನೋಟುಗಳನ್ನು ಹಾಜರು ಪಡಿಸಿದ್ದು, ಪಂಚರು ನೋಟಿನ ಮುಖಬೆಲೆ ಹಾಗೂ ನಂಬರ್‌ಗಳನ್ನು ಬರೆದುಕೊಂಡಿದುದ, ಅದನ್ನು ನಿ.ಪಿ.2 ಎಂದು ಗುರುತಿಸಲಾಗಿದೆ.

18. ನಂತರ ಆ ನೋಟುಗಳಿಗೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿ, ಸತ್ಯನಾರಾಯಣ ಇವರಿಗೆ ಕೊಟ್ಟಿದ್ದು, ಅದನ್ನು ಅವರು ತೆಗೆದುಕೊಂಡು ದೂರುದಾರರ ಪ್ಯಾಂಟಿನ ಎಡ ಜೇಬಿನಲ್ಲಿ ಇಟ್ಟಿದ್ದು, ಸತ್ಯನಾರಾಯಣ ಇವರು ಕೈಗಳನ್ನು ದ್ರಾವಣದಲ್ಲಿ ತೊಳೆದಾಗ ಅದು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಅಂತಾ ನುಡಿದಿರುತ್ತಾರೆ. ಈ ಪ್ರಕ್ರಿಯೆಯ ಬಗ್ಗೆ ನಿ.ಪಿ.3 ರಂತೆ ಪಂಚನಾಮೆಯನ್ನು ಮಾಡಿರುತ್ತಾರೆ ಹಾಗೂ ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಅಂತಾ ನುಡಿದಿರುತ್ತಾರೆ.

19. ನಂತರ ಲೋಕಾಯುಕ್ತ ಕಛೇರಿಯಿಂದ ದೂರುದಾರರು ತಮ್ಮ ಕಾರಿನಲ್ಲಿ, ಉಳಿದವರನ್ನು ಇಲಾಖಾ ವಾಹನದಲ್ಲಿ ಮಂಗಳೂರಿನ ಪಂಪ್‌ವೆಲ್‌ಗೆ ಬಂದಾಗ, ದೂರುದಾರರು ಆ.ಸ.ನೌ ರವರಿಗೆ ಎಲ್ಲಿಗೆ ಬರಬೇಕೆಂದು ಫೋನು ಮಾಡಿ ಕೇಳಿದಾಗ, ಆ.ಸ.ನೌ ರವರು ತೊಕ್ಕಟ್ಟು ಜಂಕ್ಷನ್‌ನಲ್ಲಿರುವ ಬೃಂದಾವನ ಹೋಟೆಲ್ ಬಳಿ ಬರಲು ಹೇಳಿದ್ದು, ಅದರಂತೆ ಹೋಟೆಲ್ ಬಳಿ ಹೋದಾಗ ಆ.ಸ.ನೌ ರವರು ಅಲ್ಲಿ ಕಾಣದಿದ್ದಾಗ, ಪುನಃ ಆ.ಸ.ನೌ ರವರಿಗೆ ಫೋನು ಮಾಡಿ ಕೇಳಿದಾಗ, ವೀರಮಾರುತಿ ವ್ಯಯಾಮ ಶಾಲೆಯ ಹತ್ತಿರ ಬರಲು ಹೇಳಿದ್ದು, ಅಲ್ಲಿಗೆ ಹೋದಾಗ ಆ.ಸ.ನೌ ರವರು ತಮ್ಮ ಇಲಾಖಾ ವಾಹನದಲ್ಲಿದ್ದು ಮತ್ತೆ ದೂರುದಾರರು ಫೋನ್ ಮಾಡಿದಾಗ, ಆ.ಸ.ನೌ ರವರು ತಮ್ಮ ವಾಹನವನ್ನು ಹಿಂಬಾಲಿಸುವಂತೆ ಹೇಳಿದ್ದು, ಅದರಂತೆ ಇವರು ಹಿಂಬಾಲಿಸಿದ್ದು, ಆ.ಸ.ನೌ ರವರು ಒಂದು ಮನೆಯ ಮುಂದೆ ತಮ್ಮ ವಾಹನವನ್ನು ನಿಲ್ಲಿಸಿದ್ದು, ನಂತರ ಆ.ಸ.ನೌ ರವರ ಮೊದಲನೆಯ ಮಹಡಿಯಲ್ಲಿದ್ದು, ಮನೆಗೆ ಹೋಗಿದ್ದು, ನಂತರ ದೂರುದಾರರು ಹಾಗೂ ರೂಪೇಶ್ ರವರು ಆ.ಸ.ನೌ ರವರನ್ನು ಹಿಂಬಾಲಿಸಿ ಮನೆಗೆ ಹೋಗಿರುತ್ತೇವೆ ಅಂತಾ ನುಡಿದಿರುತ್ತಾರೆ.

20. ಆ.ಸ.ನೌ ರವರು ಇವರನ್ನು ಬೆಡ್ ರೂಂಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ದೂರುದಾರರು ಹಣ ಕೊಡಲು ಹೋದಾಗ ಆ.ಸ.ನೌ ರವರು ಹಣವನ್ನು ಕೈಯಲ್ಲಿ ತೆಗೆದುಕೊಳ್ಳದೇ ಒಂದು ಕಪ್ಪುಬಣ್ಣದ ಬ್ಯಾಗಿನಲ್ಲಿ ಹಾಕಲು ಹೇಳಿದ್ದು, ಅದರಂತೆ ಇವರು ಹಣವನ್ನು ಬ್ಯಾಗಿನಲ್ಲಿ ಹಾಕಿದ್ದು, ಆ.ಸ.ನೌ ಸದರಿ ಬ್ಯಾಗನ್ನು ಮಂಚದ ಅಡಿಯಲ್ಲಿ ಬಿಸಾಡಿರುತ್ತಾರೆ ಅಂತಾ ನುಡಿದಿರುತ್ತಾರೆ.

21. ದೂರುದಾರರು ಆ.ಸ.ನೌ ರವರ ಬಳಿಯಲ್ಲಿ ಪೂರ್ತಿ ಹಣ ಕೊಡಲು ಆಗುವುದಿಲ್ಲ ರೂ.50,000/- ಕೊಡುತ್ತಿದ್ದೇನೆ ಉಳಿದದ್ದನ್ನು ನಂತರ ಕೊಡುತ್ತೇನೆ ಎಂದಿದ್ದನ್ನು ರೆಕಾರ್ಡ್ ಮಾಡಿಕೊಂಡೆ ಅಂತಾ ನುಡಿದಿರುತ್ತಾರೆ.

22.ನಂತರ ಇವರು ಮನೆಯಿಂದ ಹೊರಗೆ ಬಂದು ಬಲಗೈನಿಂದ ತಲೆವರಸಿಕೊಂಡು ತನಿಖಾಧಿಕಾರಿಗಳಿಗೆ ಸನ್ನೆ ಮಾಡಿದ್ದು, ಕೂಡಲೆ ಅವರು ಅಲ್ಲಿಗೆ ಬಂದಿರುತ್ತಾರೆ ಅಂತಾ ನುಡಿದಿರುತ್ತಾರೆ. ತನಿಖಧಿಕಾರಿಗಳು ಆ.ಸ.ನೌ ರವರಿಗೆ ಪರಿಚಯಿಸಿಕೊಂಡಿದ್ದು, ಹಣ ಎಲ್ಲಿದೆ ಅಂತಾ ಕೇಳಿದಾಗ, ಆ.ಸ.ನೌ ರವರು ಹಣ ಇಲ್ಲಾ ಅಂತಾ ಹೇಳಿದ್ದು, ಆಗ ಅವರೇ ಹುಡುಕಿದ್ದು, ಬೆಡ್ ರೂಂ ಮಂಚದ ಅಡಿಯಲ್ಲಿದ್ದ ಬ್ಯಾಗನ್ನು ಹೊರಗೆ ತೆಗೆದರು ಅದರಲ್ಲಿದ್ದ ಹಣವನ್ನು ತೆಗೆದು ನೋಡಿ, ನಿ.ಪಿ.2 ಕ್ಕೆ ಹೋಲಿಸಿದಾಗ ಈಗಾಗಲೇ ಕೊಟ್ಟ ಹಣ ಆಗಿದ್ದು, ಕವರ್‌ನಲ್ಲಿ ಹಾಕಿ ಸೀಲ್ ಮಾಡಿರುತ್ತಾರೆ ಅಂತಾ ನುಡಿದಿರುತ್ತಾರೆ. ನಂತರ ತನಿಖಾಧಿಕಾರಿಗಳು ಉಳ್ಳಾಲ ಪುರಸಭೆಯ ಮ್ಯಾನೇಜರ್ ಲೀಲಾವತಿಯವರನ್ನು ಕರೆಸಿದ್ದು, ಅವರಿಗೆ ದೂರುದಾರರು ರೆಕಾರ್ಡ್ ಮಾಡಿಕೊಂಡಂತಹ ಧ್ವನಿ ಆ.ಸ.ನೌ ರವರದ್ದು ಇರುತ್ತದೆ ಅಥವಾ ಇಲ್ಲವೇ ಖಚಿತ ಪಡಿಸಿಕೊಳ್ಳಲು ಕರೆಸಿದ್ದು, ಲೀಲಾವತಿಯವರು ಅದರಲ್ಲಿದ್ದ ಧ್ವನಿ ಆ.ಸ.ನೌ ರವರದ್ದೇ ಇರುತ್ತದೆ ಅಂತಾ ಗುರುತಿಸಿರುತ್ತಾರೆ.

23.ಆ ಬ್ಯಾಗನ್ನು ಪರಿಶೀಲಿಸಿದಾಗ ಅದರಲ್ಲಿ ದೂರುದಾರರು ಮಾಡಿದ ಕಾಮಗಾರಿಗೆ ಸಂಬಂಧಪಟ್ಟಂತೆ ಅಳತೆ ಪುಸ್ತಕ ಮತ್ತು ಬಿಲ್ಲು ಇತ್ತು, ಅವುಗಳನ್ನು ಮ್ಯಾನೇಜರ್ ಲೀಲಾವತಿಗೆ ತೋರಿಸಿ ಅವುಗಳ ನಕಲು ಪ್ರತಿಯನ್ನು ಪಡೆದು ಅಸಲು ದಾಖಲಾತಿಯನ್ನು ಲೀಲಾವತಿಯವರಿಗೆ ಕೊಟ್ಟಿರುತ್ತಾರೆ.

24.ಮಧ್ಯಾಹ್ನ 2.30ರ ಸಮಯಕ್ಕೆ ರೂಪೇಶ್ ರವರ ತಾಯಿ ತೀರಿ ಹೋದರು ಎಂದು ವಿಷಯ ತಿಳಿದುಬಂದಿದ್ದು, ಹೀಗಾಗಿ ಅವರ ಬದಲಿಗೆ ರಾಘವೇಂದ್ರ ಎನ್ನುವ ಮೆಸ್ಕಾಂ ಉದ್ಯೋಗಿಯನ್ನು ಸಾಕ್ಷಿಯನ್ನಾಗಿ ಕರೆಸಿದರು. ಅವರಿಗೆ ಎಲ್ಲಾ ವಿಷಯವನ್ನು ತಿಳಿಸಿದರು. ಸ್ಥಳದ ನಕ್ಷೆಯನ್ನು ತಯಾರಿಸಿ ನಿ.ಪಿ.4 ರಂತೆ ಮಹಜರ್ ಮಾಡಿರುತ್ತಾರೆ ಅಂತಾ ನುಡಿದಿರುತ್ತಾರೆ. ಛಾಯಚಿತ್ರಗಳನ್ನು ನಿ.ಪಿ.5 ರಂತೆ ಹಾಗೂ ಕಾಮಗಾರಿಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ನಿ.ಪಿ.6 ರಂತೆ ಮತ್ತು ಕಚ್ಚಾ ನಿಶಾನೆಯನ್ನು ನಿ.ಪಿ.7 ರಂತೆ ಗುರುತಿಸಿಕೊಂಡಿರುತ್ತಾರೆ.

25.ಶಿಸ್ತು ಪ್ರಾಧಿಕಾರ ಶ್ರೀ. ರೂಪೇಶ್ ಕಿರಣ, ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತಿ, ಮಂಗಳೂರು ಇವರು ಪಿ.ಡಬ್ಲ್ಯೂ.2 ಎಂದು ನುಡಿಸಾಕ್ಷಿ ನುಡಿದಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಿಖಾಧಿಕಾರಿಗಳು ತಿಳಿಸಿದಂತೆ ತಾನು ಲೋಕಾಯುಕ್ತ ಕಛೇರಿಗೆ ಹೋಗಿದ್ದು, ಅಲ್ಲಿ ಇನ್ನೊಬ್ಬ ಪಂಚ ಸತ್ಯನಾರಾಯಣ ಹಾಗೂ ದೂರುದಾರರು ಇದ್ದು, ಅವರನ್ನು ಪರಿಚಯಿಸಿಕೊಂಡು ದೂರಿನ ವಿಷಯದ ಬಗ್ಗೆ ತಿಳಿದು ಕೊಂಡಿರುತ್ತಾರೆ. ಅಲ್ಲಿ ದೂರುದಾರರು ಹಣವನ್ನು ಹಾಜರು ಪಡಿಸಿದ್ದ ಬಗ್ಗೆ, ಅವುಗಳಿಗೆ ಫಿನಾಪ್ತಲಿನ್ ಪೌಡರ್‌ನ್ನು ಹಚ್ಚಿದ ಬಗ್ಗೆ ಮೊಬೈಲ್‌ನಲ್ಲಿ ದಾಖಲಿಸಿಕೊಂಡ ಸಂಭಾಷಣೆಯ ಬಗ್ಗೆ ಆಲಿಸಿಕೊಂಡ ಬಗ್ಗೆ, ಸತ್ಯನಾರಾಯಣ ಇವರು ನೋಟುಗಳನ್ನು ದೂರುದಾರರ ಜೇಬಿನಲ್ಲಿ ಇಟ್ಟ ಬಗ್ಗೆ ಹಾಗೂ ಸತ್ಯನಾರಾಯಣ ದ್ರಾವಣದಲ್ಲಿ ಕೈ ತೊಳಿಸಿದ ಬಗ್ಗೆ, ಬದಲಾದ ಬಣ್ಣದ ಬಗ್ಗೆ ಈ ಎಲ್ಲಾ ಪ್ರಕ್ರಿಯೆಯ ಬಗ್ಗೆ ನಿ.ಪಿ.3 ರಂತೆ ಪಂಚನಾಮೆಯನ್ನು ಮಾಡಿದ ಬಗ್ಗೆ ಹಾಗೂ ಎಲ್ಲರೂ ಕೂಡಿ ಟ್ರಾಪ್‌ಗಾಗಿ ಹೋಗಿರುತ್ತೇವೆ ಅಂತಾ ನುಡಿದಿರುತ್ತಾರೆ.

26.ಮುಂದುವರೆದು ಇವರು ಹಾಗೂ ದೂರುದಾರರು ಆ.ಸ.ನೌ ರವರ ಮನೆಗೆ ಹೋಗಿದ್ದು, ದೂರುದಾರರು ಆ.ಸ.ನೌ ರವರ ಮನೆಯ ಒಳಗೆ ಹೋಗಿದ್ದು ತಾನು ಬೆಡ್ ರೂಂನ ಬಾಗಿಲ ಬಳಿಯಲ್ಲಿ ನಿಂತು ಕೊಂಡಿದ್ದೆ ಅಂತಾ ನುಡಿದಿರುತ್ತಾರೆ. ಅಲ್ಲಿ ದೂರುದಾರ ಹಾಗೂ ಆ.ಸ.ನೌ ರವರ ನಡುವೆ ಮಾತುಕತೆಯಾಗಿದ್ದು, ಆ.ಸ.ನೌ ರವರು ಒಂದು ಕಪ್ಪು ಬ್ಯಾಗನ್ನು ತರಿಸಿದ್ದು, ಅದರಲ್ಲಿ ದೂರುದಾರರು ರೂ.50,000/– ಗಳನ್ನು ಹಾಕಿರುತ್ತಾರೆ ಅಂತಾ ನುಡಿದಿರುತ್ತಾರೆ. ನಂತರ ದೂರುದಾರರು ಮನೆಯಿಂದ ಹೊರಗಡೆ ಬಂದು ತನಿಖಾಧಿಕಾರಿಗಳಿಗೆ ಸೂಚನೆ ನೀಡಿದ್ದು, ಆಗ ತನಿಖಾಧಿಕಾರಿಗಳು, ಅವರ ಸಿಬ್ಬಂದಿ ಹಾಗೂ ಇನ್ನೊಬ್ಬ ಪಂಚರ ಇವರು ಆ.ಸ.ನೌ ರವರ ಮನೆಯ ಒಳಗೆ ಬಂದಿದ್ದು, ತನಿಖಾಧಿಕಾರಿಯವರು ಹಣದ ಬಗ್ಗೆ ವಿಚಾರಿಸಿದ್ದು, ಆ.ಸ.ನೌ ರವರು ಮಂಚದ ಕೆಳಗೆ ಇದ್ದ ಬ್ಯಾಗನ್ನು ತೆಗೆದುಕೊಂಡಿದ್ದು, ಆಗ ಇವರು ಹಾಗೂ ಇನ್ನೊಬ್ಬ ಪಂಚ ಆ ನೋಟಿನ ಮೇಲಿನ ಸಂಖ್ಯೆಗಳನ್ನು ನೋಡಿದಾಗ, ಈಗಾಗಲೇ ನಿ.ಪಿ.2 ರಲ್ಲಿ ಬರೆದುಕೊಂಡಿದ್ದ ಹಾಳೆಯ ಜೊತೆಗೆ ತಾಳೆಯಾಗಿದ್ದು ಇರುತ್ತವೆ ಅಂತಾ ನುಡಿದಿರುತ್ತಾರೆ.

ದೂರುದಾರ ಹಾಗೂ ಆ.ಸ.ನೌ ರವರ ನಡುವೆ ನಡೆದಿದ್ದ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡಿದ್ದರು. ಆ.ಸ.ನೌ ರವರು ನಿ.ಪಿ.6 ರಂತೆ ಸಮಜಾಯಿಷಿಯನ್ನು ನೀಡಿದ್ದು, ಮನೆಯ ನಕ್ಷೆಯನ್ನು ನಿ.ಪಿ.7 ರಂತೆ ತೆಗೆದಿದ್ದು, ಮಹಜರ್ ಮಾಡುತ್ತಿದ್ದಾಗ ಮಧ್ಯಾಹ್ನ 2 ಗಂಟೆಯಾಗಿದ್ದು, ಇವರ ತಾಯಿಯವರು ಮೃತಪಟ್ಟಿದ್ದು ಬಗ್ಗೆ ವಿಷಯ ತಿಳಿದು ಬಂದಿದ್ದು, ನಂತರ ತಾನು ಅಲ್ಲಿಂದ ಹೊರಟು ಬಂದಿರುತ್ತೇನೆ ಅಂತಾ ನುಡಿದಿರುತ್ತಾರೆ.

27. ತನಿಖಾಧಿಕಾರಿಗಳಾದ ಶ್ರೀ. ನವೀನಚಂದ್ರ ಜೋಗಿ ಇವರು ಪಿ.ಡಬ್ಲ್ಯೂ.3 ಎಂದು ಸಾಕ್ಷಿ ನುಡಿದಿದ್ದು, ನಿ.ಪಿ.8 ರಿಂದ 16 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿದ್ದು, ಇವರು ದೂರುದಾರ ಹಾಗೂ ಪಿ.ಡಬ್ಲ್ಯೂ.2 ರವರು ಮುಖ್ಯ ವಿಚಾರಣೆಯಲ್ಲಿ ನುಡಿದಂತೆ ಸಾಕ್ಷಿಯನ್ನು ನುಡಿದಿರುತ್ತಾರೆ.

28. ಮುಂದುವರೆದು ಮಧ್ಯಾಹ್ನ 2.30 ಗಂಟೆಗೆ ಪಂಚಸಾಕ್ಷಿ ರೂಪೇಶ್ ರವರ ತಾಯಿ ಮೃತಪಟ್ಟಿರುತ್ತಾರೆ ಎಂಬ ವಿಷಯ ತಿಳಿದಿದ್ದರಿಂದ ಇನ್ನೊಬ್ಬ ಪಂಚಸಾಕ್ಷಿಯನ್ನಾಗಿ ಬರಮಾಡಿಕೊಂಡು ಅವರಿಗೆ ನಡೆದ ಎಲ್ಲಾ ಪ್ರಕ್ರಿಯೆ ಬಗ್ಗೆ ಮಾಹಿತಿಯನ್ನು ತಿಳಿಸಿ, ಅವರನ್ನು ಪಂಚ-1 ಎಂದು ನಿಯೋಜಿಸಿಕೊಂಡು ರೂಪೇಶ್ ರವರನ್ನು ಕಳುಹಿಸಿ ಕೊಟ್ಟಿದ್ದು, ರೂಪೇಶ್ ರವರು ಸಹಿ ಮಾಡಿದ್ದ ದಾಖಲೆಗಳಲ್ಲಿ ಬದಲಿ ಪಂಚಸಾಕ್ಷಿ ರವರ ಸಹಿಗಳನ್ನು ಪಡೆದುಕೊಂಡೆ ಅಂತಾ ನುಡಿದಿರುತ್ತಾರೆ. ನಂತರ ಟ್ರಾಪ್ ಪಂಚನಾಮೆಯನ್ನು, ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

29. ದೂರುದಾರರ ಪ್ರಕಾರ ಉಳ್ಳಾಲ ಪುರಸಭೆಯಲ್ಲಿ ಚರಂಡಿಯ ಹೂಳೆತ್ತುವ ಗುತ್ತಿಗೆ ಕೆಲಸವನ್ನು 2012ರಲ್ಲಿ ಮಾಡಿದ ಬಾಬ್ತು ರೂ.10,50,000/- ಗಳು ಹಾಗೂ 2013ನೇ ಸಾಲಿನಲ್ಲಿ ಮಾಡಿದ ಗುತ್ತಿಗೆ ಕೆಲಸದ ಬಾಬ್ತು ರೂ.7,20,000/- ದೂರುದಾರರಿಗೆ ಉಳ್ಳಾಲ ಪುರಸಭೆಯಿಂದ ದೊರೆಯುವುದು ಬಾಕಿ ಇತ್ತು ಎನ್ನುವ ವಿಷಯ ಆ.ಸ.ನೌ ರವರು ಅಲ್ಲಗಳೆದಿರುವುದಿಲ್ಲ.

R

ಆ.ಸ.ನೌ ರವರ ಪ್ರಕಾರ ಇವರು ಉಳ್ಳಾಲ ಪುರಸಭೆಯ ಮುಖ್ಯಾಧಿಕಾರಿಯಾಗಿ ಕರ್ತವ್ಯ ವಹಿಸಿಕೊಂಡ ನಂತರ ದೂರುದಾರರು ಬಿಲ್ಲುಗಳನ್ನು ಸಲ್ಲಿಸಿದ್ದು, ಅದರಲ್ಲಿ ನ್ಯೂನ್ಯತೆಗಳನ್ನು ಸರಿಪಡಿಸಲು ಹೇಳಿರುತ್ತೇನೆ ಅಂತಾ ವಾದವಿರುತ್ತದೆ. ಈ ವಿಷಯವನ್ನು ಒಪ್ಪಿಕೊಂಡರೂ ಸಹ ಇಲ್ಲಿ ಗಮನಿಸಬೇಕಾದ ಸಂಗತಿ ಏನೆಂದರೆ ಎಲ್ಲಾ ಬಿಲ್ಲುಗಳಲ್ಲಿ ನ್ಯೂನ್ಯತೆಗಳು ಇರುತ್ತವೆ ಎನ್ನುವ ಬಗ್ಗೆ ಆ.ಸ.ನೌ ರವರು ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಮೇಲೆ ಹೇಳಿದ ನ್ಯೂನ್ಯತೆ ಇರುವ ಬಿಲ್ಲುಗಳಲ್ಲಿ ಎಷ್ಟು ಮೊತ್ತದ ಬಿಲ್ಲುಗಳು ಸರಿಯಾಗಿ ಇರುವುದಿಲ್ಲ ಅಂತಾ ಆ.ಸ.ನೌ ರವರು ಹೇಳಿರುವುದಿಲ್ಲ. ಬಿಲ್ಲಿನ ಮೊತ್ತ ರೂ.10,50,000/- ಗಳಾಗಿದ್ದು, ಅದರಲ್ಲಿ ಎಷ್ಟು ಮೊತ್ತದ ಬಿಲ್ಲಿನ ಹಣ ಸರಿಯಾಗಿರುವುದಿಲ್ಲ ಅಂತಾ ಕಂಡುಬಂದಲ್ಲಿ ಅಷ್ಟು ಹಣವನ್ನು ಆ.ಸ.ನೌ ರವರು ತಡೆಹಿಡಿಯಬೇಕಾಗಿತ್ತು. ಆದರೆ ಹಾಗೆ ಮಾಡಿರುವುದಿಲ್ಲ. ಇನ್ನೊಂದು ಗಮನಿಸಬೇಕಾದ ಸಂಗತಿ ಏನೆಂದರೆ ಆ.ಸ.ನೌ ರವರು ದೂರುದಾರರಿಗೆ ಲಿಖಿತವಾಗಿ ಎಷ್ಟು ಮೊತ್ತದ ಹಣ ಬಿಲ್ಲುಗಳು ಸರಿಯಾಗಿ ಇರುವುದಿಲ್ಲ. ಆದ್ದರಿಂದ ಹಣ ಪಾವತಿಸಲು ಆಗುವುದಿಲ್ಲವೆಂದು ದೂರುದಾರರಿಗೆ ತಿಳಿಸಿರುವುದಿಲ್ಲ. ಬಾಕಿ ಉಳಿದ ಬಿಲ್ಲು ಮೊತ್ತದ ರೂ.10,50,000/- ಗಳಾಗಿದ್ದರಿಂದ ಸ್ವಭಾವಿಕವಾಗಿ ಯಾರೇ ಆದರೂ ಮೊದಲು ಸಂಬಂಧಪಟ್ಟ ಅಧಿಕಾರಿಗಳಿಗೆ ಭೇಟಿಯಾಗಿ ಬಿಲ್ಲನ್ನು ಮಾಡಿ ಕೊಡಲು ಕೇಳುತ್ತಾರೆ. ಈ ವಿಚಾರಣೆಯಲ್ಲಿ ಆ.ಸ.ನೌ ರವರು ಆಗಸ್ಟ್-2013 ರಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದು, ದೂರುದಾರರು ಕನಿಷ್ಠ ಪಕ್ಷ 10-15 ಬಾರಿ ಬಿಲ್ಲಗಳ ಪಾವತಿ ಸಂಬಂಧ ಭೇಟಿಯಾಗಿರುತ್ತಾರೆ ಅಂತಾ ಸಾಕ್ಷಿಯಿಂದ ಕಂಡುಬರುತ್ತದೆ. ದೂರುದಾರರು ದೂರನ್ನು ಸಲ್ಲಿಸಿದ್ದ ದಿನಾಂಕ: 13/06/2014 ಅಂದರೆ ಆ.ಸ.ನೌ ರವರು ಕರ್ತವ್ಯ ವಹಿಸಿಕೊಂಡ ಕನಿಷ್ಠಪಕ್ಷ 9 ತಿಂಗಳ ನಂತರ ದೂರನ್ನು ಸಲ್ಲಿಸಿರುತ್ತಾರೆ. ಈ 9 ತಿಂಗಳ ಅವಧಿಯಲ್ಲಿ ಆ.ಸ.ನೌ ರವರು ಬಿಲ್ಲುಗಳನ್ನು ಪರಿಶೀಲಿಸಿದಾಗ ನ್ಯೂನ್ಯತೆಗಳು ಕಂಡ ಬಗ್ಗೆ ದೂರುದಾರರಿಗೆ ಲಿಖಿತವಾಗಿ ತಿಳಿಸಬೇಕಾಗಿತ್ತು. ಆದರೆ ಹಾಗೆ ಮಾಡಿರುವುದಿಲ್ಲ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ಆ.ಸ.ನೌ ರವರ ಈ ವಾದ ಒಪ್ಪಿಕೊಳ್ಳಲು ಸಾಧ್ಯವಿರುವುದಿಲ್ಲ.

&

30. ದೂರುದಾರರ ಪ್ರಕಾರ ಲಂಚದ ಹಣದ ಬೇಡಿಕೆ ಬಗ್ಗೆ ನಿ.ಪಿ.1 ರಲ್ಲಿ ಆಪಾದಿತ ನೌಕರರನ್ನು 2013ರ ನವೆಂಬರ್ ತಿಂಗಳಲ್ಲಿ ಭೇಟಿ ಮಾಡಿ ವಿಚಾರಿಸಿದೆ ಅಂತಾ ಹೇಳಿದ್ದು, ನಂತರ ದಿನಾಂಕ: 10/06/2014; 11/06/21014 ಮತ್ತು 12/06/2014ರಂದು ಹಣ ಕೇಳಿದರೆಂದು ಹೇಳಿದ್ದು, ನಂತರ ದಿನಾಂಕ: 10/06/2014, 12/06/2014 ಈ ಎರಡು ದಿನ ದೂರವಾಣಿಯಲ್ಲಿ ಬೇಡಿಕೆ ಇಟ್ಟಿರುತ್ತಾರೆ ಅಂತಾ ಹೇಳಿರುತ್ತಾರೆ. ಆದರೆ ಆ.ಸ.ನೌ ರವರ ಪ್ರಕಾರ ಈ ಸಂಭಾಷಣೆಯನ್ನು ಅಲ್ಲಗಳೆದಿದ್ದು, ತಾನು ದೂರುದಾರರೊಂದಿಗೆ ದೂರವಾಣಿಯಲ್ಲಿ ಸಂಭಾಷಣೆ ಮಾಡಿಲ್ಲ ಹಾಗೂ ತನ್ನದೆಂದು ದೂರಿನಲ್ಲಿ ನಮೂದಿಸಿರುವ ದೂರವಾಣಿ ಸಂಖ್ಯೆ ತನ್ನದಾಗಿರುವುದಿಲ್ಲ ಎಂದು ವಾದ ಇರುತ್ತದೆ. ಮುಂದುವರೆದು ಆ.ಸ.ನೌ ರವರ ಪ್ರಕಾರ ಹಣದ ಬೇಡಿಕೆ ಬಗ್ಗೆ ಶಿಸ್ತು ಪ್ರಾಧಿಕಾರದ ಪ್ರಮುಖ ಸಾಕ್ಷ್ಯವೆಂದರೆ ದೂರವಾಣಿ ಸಂಭಾಷಣೆ. ದೂರಿನಲ್ಲಿ ಆ.ಸ.ನೌ ತನ್ನದೆಂದು ತೋರಿಸುವಂತಹ ದೂರವಾಣಿ ತನ್ನಲ್ಲಿ ಇರುವುದಿಲ್ಲ, ಈ ಬಗ್ಗೆ ಆ ದೂರವಾಣಿ ತನಗೆ ಸೇರಿದ್ದೆಂದು ತೋರಿಸುವಂತಹ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಅಂತಾ ಆ.ಸ.ನೌ ರವರ ವಾದ ಇರುತ್ತದೆ. ಮುಂದುವರೆದು ಇವರು ತನಿಖಾಧಿಕಾರಿಗಳು ದಾಖಲೆ ಪಡೆದಿದ್ದೇನೆಂದು ಹೇಳಿದ್ದಾಗ್ಯೂ ಹಾಜರುಪಡಿಸಿರುವುದಿಲ್ಲ. ತನಿಖಾಧಿಕಾರಿಗಳು ತಮ್ಮ ಸಾಕ್ಷ್ಯದ ಪ್ಯಾರಾ ನಂ.30 ರಲ್ಲಿ ನಿ.ಪಿ.14 (ಸಿ.ಡಿ.ಆರ್) ರಲ್ಲಿ ಯಾವುದೇ ವಿಳಾಸವಿಲ್ಲ ಮತ್ತು ಅದನ್ನು ಯಾರು ದೃಢೀಕರಿಸಿರುವುದಿಲ್ಲ. ಸದರಿ ನಂಬರ್‌ಗಳು ಯಾರಿಗೆ ಸಂಬಂಧಪಟ್ಟದ್ದವೆಂದು ಎನ್ನುವ ಬಗ್ಗೆ ದಾಖಲೆಗಳನ್ನು ಪಡೆದಿದ್ದೇ ಆದರೆ ಸದರಿ ದಾಖಲಾತಿಗಳು ಈ ಕಂಡುಬರುತ್ತಿಲ್ಲವೆಂದು ನುಡಿದಿರುತ್ತಾರೆ ಅಂತಾ ಹೇಳಿರುತ್ತಾರೆ.

31. ಮುಂದುವರೆದು ಆ.ಸ.ನೌ ರವರ ಪ್ರಕಾರ ತನಿಖಾಧಿಕಾರಿಗಳು ದೂರವಾಣಿ ನಂಬರ್ ಆ.ಸ.ನೌ ರವರಿಗೆ ಸೇರಿದ್ದು ಇಲ್ಲಾ ಅಂತಾ ಗೊತ್ತಾದ ನಂತರ ಯಾರ ಹೆಸರಿಗೆ ದೂರವಾಣಿ ಇರುತ್ತದೆ ಅಂತಾ ವಿಚಾರಣೆ ಮಾಡಿದಾಗ ಅದು ಆ.ಸ.ನೌ ರವರಿಗೆ ಸೇರಿದ್ದು ಇರುವುದಿಲ್ಲ ಅಂತಾ ಉದ್ದೇಶ ಪೂರ್ವಕವಾಗಿ ಆ ದಾಖಲಾತಿಯನ್ನು ತನಿಖಾಧಿಕಾರಿಗಳು ಹಾಜರುಪಡಿಸಿರುವುದಿಲ್ಲ ಅಂತಾ ವಾದ ಇರುತ್ತದೆ. ನಿ.ಪಿ.14 call details for DEL number 8147595655

from 11/06/2014 to 13/06/2014 ಅಂತಾ ಇದ್ದು, ಇದನ್ನು Tata Tele Service Limited ಇವರು ನೀಡಿದ್ದು, ಕೊನೆ ಪುಟದಲ್ಲಿ Note: This is a computer generated statement and it does not require signature ಅಂತಾ ನಮೂದು ಇರುತ್ತದೆ. ಆದ್ದರಿಂದ, ನನ್ನ ಅಭಿಪ್ರಾಯದಲ್ಲಿ ಅದನ್ನು ದೃಢೀಕರಿಸುವ ಅವಶ್ಯಕತೆ ಇರುವುದಿಲ್ಲ. ನಿ.ಪಿ.14ರಲ್ಲಿ ದಿನಾಂಕ: 11/06/2014 ರಿಂದ 13/06/2014 ರವರೆಗೆ ಮೊಬೈಲ್ ನಂಬರ್ 8147595655 ಇಂದ ಕರೆ ಮಾಡಿದ ಬಗ್ಗೆ ಹಾಗೂ ಸ್ವೀಕರಿಸಿದ ಬಗ್ಗೆ ಮಾಹಿತಿ ಇರುತ್ತದೆ. ದೂರುದಾರರ ಮೊಬೈಲ್ ನಂಬರ್ ಆತನ ಪ್ರಕಾರ 9448129207 ಇರುತ್ತದೆ. ನಿ.ಪಿ.14ರ ಪ್ರಕಾರ ದೂರುದಾರರ ಮೊಬೈಲ್ ನಂಬರ್ ನಿಂದ ಮೊಬೈಲ್ ನಂಬರ್ 8147595655 ಗೆ ದಿನಾಂಕ: 11/06/2014 ರ 14.35.17 ವರೆಗೆ ಮಾತನಾಡಿದ್ದು ಇರುತ್ತದೆ. ಅದರಂತೆ ದಿನಾಂಕ: 12/06/2014 ರಂದು ಮೊಬೈಲ್ ನಂಬರ್ 8147595655 ಇಂದ ದೂರುದಾರರ ಮೊಬೈಲ್ ನಂಬರ್‌ಗೆ ಮಾತನಾಡಿದ್ದು ಕಂಡುಬರುತ್ತದೆ. ಅದರಂತೆ ದಿನಾಂಕ: 13/06/2014 ರಂದು ಮೊಬೈಲ್ ನಂಬರ್ 9448129207 ಇಂದ ಮೊಬೈಲ್ ನಂಬರ್ 8147595655 ಗೆ 5 ಬಾರಿ ಮಾತನಾಡಿದ್ದು ಹಾಗೂ ಮೊಬೈಲ್ ನಂಬರ್ 8147595655 ಇಂದ ಮೊಬೈಲ್ ನಂಬರ್ 9448129207 ಗೆ 2 ಬಾರಿ ಮಾತನಾಡಿದ್ದು ಕಂಡುಬರುತ್ತದೆ. ನಿ.ಪಿ.1 ರ ಪ್ರಕಾರ ದೂರುದಾರರು ಆ.ಸ.ನೌ ರವರ ಜೊತೆಗೆ ದಿನಾಂಕ: 11/06/2014 ರಂದು ಮಾತನಾಡಿದ್ದು, ಲಂಚದ ಹಣ ಬೇಡಿಕೆ ಇಟ್ಟಿರುತ್ತಾರೆ ಅಂತ ಅದನ್ನು ತಾನು ತನ್ನ ಮೊಬೈಲ್‌ನಲ್ಲಿ ದಾಖಲಿಸಿಕೊಂಡಿದ್ದು ಇರುತ್ತದೆ ಅಂತಾ ನಮೂದು ಇರುತ್ತದೆ. ಕರೆ ಮಾಡಿದ ಬಗ್ಗೆ ನಿ.ಪಿ.14 ರಿಂದ ಕಂಡುಬಂದಿರುತ್ತದೆ. ಅದರಂತೆ ನಿ.ಪಿ.1 ರಲ್ಲಿ "ನಿನ್ನೆ ದಿನಾಂಕ: 12/06/2014 ರಂದು ಸಂಜೆ 6 ಗಂಟೆಗೆ ಮುಖ್ಯಾಧಿಕಾರಿಯವರು ಮೊಬೈಲ್ ಮೂಲಕ ದಿನಾಂಕ: 13/06/2014 ರ ಬೆಳಗ್ಗೆ ಫೋನು ಮಾಡಿ ಹಣದೊಂದಿಗೆ ನನ್ನನ್ನು ಭೇಟಿ ಮಾಡುವಂತೆ ಸೂಚಿಸಿರುತ್ತಾರೆ" ಅಂತಾ ನಮೂದು ಇರುತ್ತದೆ. ನಿ.ಪಿ.14ನ್ನು ಪರಿಶೀಲಿಸಿದಾಗ ದಿನಾಂಕ: 12/06/2014 ರಲ್ಲಿ ಮೊಬೈಲ್

ನಂಬರ್ 8147595655 ಇಂದ ದೂರುದಾರರ ಮೊಬೈಲ್ ನಂಬರ್ 9448129207 ಗೆ ಸಂಜೆ 6 ಗಂಟೆಗೆ ಮಾತನಾಡಿದ್ದು ಕಂಡುಬರುತ್ತದೆ. ತನಿಖಾಧಿಕಾರಿಗಳು ಮೊಬೈಲ್ ನಂಬರ್ 8147595655 ಯಾರದ್ದು ಇರುತ್ತದೆ ಅಂತಾ ತೋರಿಸಲು ದಾಖಲೆಗಳನ್ನು ಪಡೆದುಕೊಳ್ಳದಿದ್ದರೂ ಸಹಿತ, ಸದರಿ ಮೊಬೈಲ್ ನಂಬರ್ ಆ.ಸ.ನೌ ರವರು ತಮಗೆ ಸೇರಿದ್ದು ಇರುವುದಿಲ್ಲ ಅಂತಾ ಪಿ.ಡಬ್ಲ್ಯೂ.3 (ತನಿಖಾಧಿಕಾರಿಗಳು) ಇವರಿಗೆ ತೋರಿಸಿ ದಾಖಲೆಗಳನ್ನು ಗುರುತಿಸಿಕೊಳ್ಳಬಹುದಾಗಿದ್ದು, ಕೇವಲ ಸದರಿ ಮೊಬೈಲ್ ತನಗೆ ಸಂಬಂಧಿಸಿದ್ದು ಇರುವುದಿಲ್ಲ ಅಂತಾ ಹೇಳಿದ ಮಾತ್ರಕ್ಕೆ ಸಾಕಾಗುವುದಿಲ್ಲ. ಈ ಬಗ್ಗೆ ಆ.ಸ.ನೌ ರವರು ಸದರಿ ಮೊಬೈಲ್ ಬಗ್ಗೆ ನನ್ನ ಅಭಿಪ್ರಾಯದಲ್ಲಿ ದಾಖಲಾತಿಗಳನ್ನು ಹಾಜರುಪಡಿಸಬೇಕಾಗಿತ್ತು. ಆದರೆ ಹಾಗೆ ಮಾಡಿರುವುದಿಲ್ಲ.

32. ಆ.ಸ.ನೌ ರವರ ಪ್ರಕಾರ "ಶಿಸ್ತು ಪ್ರಾಧಿಕಾರದ 3ನೇ ಸಾಕ್ಷಿರವರ ಮುಖ್ಯ ವಿಚಾರಣೆಯಲ್ಲಿ ಹಾಗೂ ಪಾಟಿಸವಾಲಿನಲ್ಲಿ ದಿನಾಂಕ: 13/06/2014 ರಂದು ಬೆಳಗ್ಗೆ 9.30ಕ್ಕೆ ದೂರುದಾರರು ಕಛೇರಿಗೆ ಬಂದು ದೂರು ನೀಡಿದ್ದಾರೆಂದು, ನಂತರ ಪಂಚರನ್ನು ಕರೆಸಿ ಎಲ್ಲಾ ಪ್ರಕ್ರಿಯೆಗಳನ್ನು ಬೆಳಗ್ಗೆ 10.25 ರಿಂದ 11.25 ರವರೆಗೆ ಮಹಜರ್ ಕ್ರಮ ಜರುಗಿಸಿದೆ. ನಂತರ ಬೆಳಗ್ಗೆ 11.30 ರ ಸಮಯಕ್ಕೆ ನಮ್ಮ ಕಛೇರಿಯಿಂದ ಹೊರಟಿದ್ದಾಗಿ ಹೇಳಿರುತ್ತಾರೆ". ಮುಂದುವರೆದು ಆ.ಸ.ನೌ ರರ ಪ್ರಕಾರ ಇವರು ದಿನಾಂಕ: 10/01/2022 ರ ಪಾಟಿಸವಾಲಿನ ಪ್ಯಾರಾ ನಂ.6 ರಲ್ಲಿ ಬೆಳಗ್ಗೆ 9.30 ರಿಂದ 11.30 ರವರೆಗೆ ಆ.ಸ.ನೌ ರವರಿಂದ ದೂರುದಾರರಿಗೆ ಯಾವುದಾದರು ಕರೆಗಳು ಬಂದಿದ್ದವೇ ಎನ್ನುವುದಕ್ಕೆ ಸಾಕ್ಷಿ ನೆನಪಿಲ್ಲ ಅಂತಾ ಹೇಳಿರುತ್ತಾರೆ. ದೂರುದಾರರ ಪಾಟಿಸವಾಲಿನಲ್ಲಿ ಪ್ಯಾರಾ ನಂ.48 ರಲ್ಲಿ "ನಾನು ಲೋಕಾಯುಕ್ತ ಕಛೇರಿಯಲ್ಲಿದ್ದಾಗ ಆ.ಸ.ನೌ ರವರ ದೂರವಾಣಿಯಿಂದ ನಿಮಗೇನಾದರೂ ಕರೆ ಬಂದಿತ್ತು ಎನ್ನುವುದಕ್ಕೆ ಸಾಕ್ಷಿ ನೆನಪಿಲ್ಲ ಎಂದು ಹೇಳಿರುತ್ತಾರೆ". ಮುಂದುವರೆದು ಆ.ಸ.ನೌ ರವರ ಪ್ರಕಾರ ನಿ.ಪಿ.14 ದೂರವಾಣಿ ಕರೆಗಳ ಪಟ್ಟಿಯಲ್ಲಿ ಪುಟ ನಂ.4 ರಲ್ಲಿ ದಿನಾಂಕ: 13/06/2014 ರಂದು ಬೆಳಗ್ಗೆ 11.17.02 ರ ಸಮಯದಲ್ಲಿ ಸುಮಾರು 45 ಸೆಕೆಂಡು ಹಾಗೂ 11.28.12 ರಲ್ಲಿ 14 ಸೆಕೆಂಡು ದೂರುದಾರರ

ಮೊಬೈಲ್ ನಂಬರ್ 9448129207 ಇಂದ ಮೊಬೈಲ್ ನಂಬರ್ 8147595655 ಗೆ ಕರೆ ಮಾಡಿರುವುದು ನಿ.ಪಿ.14 ರಲ್ಲಿ ದಾಖಲಾಗಿದೆ. ದೂರುದಾರರು ಲೋಕಾಯುಕ್ತ ಕಛೇರಿಯಲ್ಲಿ ದೂರು ನೀಡಿ ಅಲ್ಲಿ ಪ್ರಕ್ರಿಯೆಗಳು ನಡೆಯುತ್ತಿರುವಾಗ ಆ.ಸ.ನೌ ರವರಿಗೆ ಕರೆ ಮಾಡಲು ಸಾಧ್ಯವೇ ಹಾಗೂ ಕಾರಣವೇನು? ಈ ಬಗ್ಗೆ ದೂರುದಾರರ ಹೇಳಿಕೆಯಲ್ಲಾಗಲೀ ಅಥವಾ ವಹಿಸಿಕೊಡುವ ಪಂಚನಾಮೆ ನಿ.ಪಿ.3 ರಲ್ಲಾಗಲೀ ದಾಖಲಿಸಿರುವುದಿಲ್ಲ ಅಂತಾ ವಾದ ಇರುತ್ತದೆ. ಆದರೆ ಪಿ.ಡಬ್ಲ್ಯೂ.1 ಇವರು ತಮ್ಮ ಮುಖ್ಯ ವಿಚಾರಣೆಯ ಪ್ಯಾರಾ ನಂ.2 ರಲ್ಲಿ "ಲೋಕಾಯುಕ್ತ ಕಛೇರಿಯನ್ನು ಬೆಳಗ್ಗೆ 11.30 ಗಂಟೆಗೆ ಬಿಟ್ಟಿದ್ದು, 2 ಇಲಾಖಾ ವಾಹನಗಳು ಮತ್ತು ನನ್ನ ಕಾರು ಇವುಗಳಲ್ಲಿ ಎಲ್ಲರೂ ಮಂಗಳೂರಿನ ಪಂಪ್‌ವೇಲ್ ಮುಟ್ಟಿದೆವು. ಅಲ್ಲಿಂದ ನಾವು ಆ.ಸ.ನೌ ರವರಿಗೆ ಫೋನು ಮಾಡಿ ಎಲ್ಲಿ ಬರಬೇಕೆಂದು ಕೇಳಿದೆ. ಆಗ ಅವರು ತೊಕ್ಕೊಟ್ಟು ಜಂಕ್ಷನ್‌ನಲ್ಲಿರುವ ಬೃಂದಾವನ ಹೋಟೆಲ್ ಬಳಿಗೆ ಬರುತ್ತೇನೆ ನೀವು ಬನ್ನಿ ಎಂದು ಹೇಳಿದರು. ನಂತರ ನಾವು ಸದರಿ ಹೋಟೆಲಗೆ ಹೋದೆವು ಅಲ್ಲಿ ಆ.ಸ.ನೌ ರವರು ಕಾಣಲಿಲ್ಲ. ಆಗ ಪುನಃ ಫೋನು ಮಾಡಿದೆ ಆಗ ಅವರು ಅಲ್ಲಿಂದ ಸ್ವಲ್ಪ ಮುಂದಕ್ಕೆ ಇರುವ ವೀರ ಮಾರುತಿ ವ್ಯಾಯಾಮ ಶಾಲೆ ಹತ್ತಿರ ಬನ್ನಿ ಎಂದರು, ನಾವು ಅಲ್ಲಿಗೆ ಹೋದೆವು, ಅಲ್ಲಿ ಆ.ಸ.ನೌ ರವರು ಅವರ ಇಲಾಖಾ ವಾಹನದಲ್ಲಿ ಇದ್ದರು. ನಾನು ಅವರಿಗೆ ಫೋನು ಮಾಡಿದೆ, ಆಗ ಅವರು ನಮ್ಮ ವಾಹನವನ್ನು ಫಾಲೊ ಮಾಡಿ ಎಂದು ಹೇಳಿದರು, ನಾನು ಅವರನ್ನು ಫಾಲೊ ಮಾಡಿದೆ. ಅವರು ಕೊಲ್ಲೆ ಎಂದಿರುವ ಸ್ಥಳದಲ್ಲಿ ಬಲಕ್ಕೆ ತಿರುಗಿದರು. ಅಲ್ಲಿ ನೇರವಾಗಿ ಅವರ ಮನೆ ಮುಂದೆ ನಿಲ್ಲಿಸಿದರು. ಸಾಕ್ಷಿಯು ಆ ಸಮಯದಲ್ಲಿ ಆ ಮನೆ ಅವರದ್ದೆಂದು ಗೊತ್ತಿರಲಿಲ್ಲ ಎನ್ನುತ್ತಾರೆ. ಆ.ಸ.ನೌ ರವರ ಮನೆ ಮೊದಲನೆ ಮಹಡಿಯಲ್ಲಿತ್ತು" ಅಂತಾ ನುಡಿದಿರುತ್ತಾರೆ. ನಿ.ಪಿ.3 ಪ್ರಾಯೋಗಿಕ ಪಂಚನಾಮೆ ಇದ್ದು, ಅದರ ಪ್ರಕಾರ ಪಂಚನಾಮೆಯನ್ನು ದಿನಾಂಕ: 13/06/2014 ರಂದು ಬೆಳಗ್ಗೆ 10.25 ರಿಂದ 11.25 ರವರೆಗೆ ಮಾಡಿರುತ್ತಾರೆ ಅಂತಾ ನಮೂದು ಇರುತ್ತದೆ. ನಿ.ಪಿ.14 ರ ಪ್ರಕಾರ ದೂರುದಾರರು ತನ್ನ ಮೊಬೈಲ್ ನಂಬರ್ 8147595655 ಕ್ಕೆ 11.17.02 ಗೆ ಫೋನು ಮಾಡಿದ್ದು ಇರುತ್ತದೆ. ಈಗಾಗಲೇ ಮೇಲೆ ಹೇಳಿದ ಪ್ರಕಾರ ದೂರುದಾರರು ಆ.ಸ.ನೌ ರವರಿಗೆ ಫೋನು ಮಾಡಿ ಎಲ್ಲಿಗೆ ಬರಬೇಕೆಂದು ಕೇಳಿದ್ದು ಇರುತ್ತದೆ.

ಪಂಚನಾಮೆಯಲ್ಲಿ ಬರೆದ ವೇಳೆ ಹಾಗೂ ಫೋನು ಮಾಡಿದ ವೇಳೆಯಲ್ಲಿ ಕೇವಲ 2 ರಿಂದ 3 ನಿಮಿಷ ಮಾತ್ರ ಅಂತರವಿರುತ್ತದೆ ಅಂದ ಮಟ್ಟಿಗೆ ಮಾತ್ರ ಆ.ಸ.ನೌ ರವರು ಮೇಲೆ ಹೇಳಿದ ವಾದ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ತನಿಖಾಧಿಕಾರಿಗಳಿಗೂ ಸಹಿತ ಇಷ್ಟು ನಿಖರವಾದ ವೇಳೆ ಅಂದರೆ ನಿಮಿಷ ಮತ್ತು ಸೆಕೆಂಡು ಬರೆಯಲು ಸಾಧ್ಯವಿರುವುದಿಲ್ಲ. ಪಿ.ಡಬ್ಲ್ಯೂ.1 ಇವರು ಮೇಲೆ ಹೇಳಿದ ಸಾಕ್ಷ್ಯದ ಪ್ರಕಾರ ಆ.ಸ.ನೌ ರವರು ಎಲ್ಲಿ ಎಲ್ಲಿ ಬರಬೇಕೆಂದು ಹೇಳಿದ್ದು, ಹಾಗೆ ಹಾಗೆ ಪಿ.ಡಬ್ಲ್ಯೂ.1 ರವರು ಅವರನ್ನು ಹಿಂಬಾಲಿಸಿರುತ್ತಾರೆ. ಆದ್ದರಿಂದ ನಿ.ಪಿ.14 ರಲ್ಲಿ ನಮೂದು ಇದ್ದಂತೆ ದೂರುದಾರರ ಮೊಬೈಲ್ ನಿಂದ ಆ.ಸ.ನೌ ರವರ ಮೊಬೈಲ್‌ಗೆ ಕರೆ ಮಾಡಿದ್ದು ಕಂಡುಬರುತ್ತದೆ. ಇದರಲ್ಲಿ ನನ್ನ ಅಭಿಪ್ರಾಯದಲ್ಲಿ ಯಾವುದೇ ಲೋಪದೋಷಗಳು ಕಂಡುಬಂದಿರುವುದಿಲ್ಲ.

33. ಆ.ಸ.ನೌ ರವರ ಪ್ರಕಾರ ದೂರುದಾರ ಹಾಗೂ ಆ.ಸ.ನೌ ರವರ ನಡುವೆ ದಿನಾಂಕ: 11/06/2014 ರಂದು ಯಾವುದೇ ಲಂಚದ ಹಣ ಬೇಡಿಕೆ ಇಟ್ಟಿರುವುದಿಲ್ಲ ಅಂತಾ ವಾದ ಇರುತ್ತದೆ ಹಾಗೂ ಸಂಭಾಷಣೆಯನ್ನು ಪರಿಶೀಲಿಸಿದಾಗ ದೂರುದಾರರು "ಅರ್ಧ" ಅದರದ್ದು ನಿಮಗೆ 80 ಕೊಡಬೇಕಂತ ಅಲ್ಲಾ 80,000/- ಅಲ್ಲಾ ಎಂದು ಹೇಳಿರುತ್ತಾರೆ ಅಂತಾ ಕಂಡುಬರುತ್ತದೆ. ಅಂತಾ ಹೇಳಿರುತ್ತಾರೆ. ಅಲ್ಲದೇ ನಿ.ಪಿ.3 ರಲ್ಲಿ ಮತ್ತು ನಿ.ಡಿ.2 ರಲ್ಲಿ ಈ ಸಂಭಾಷಣೆ ಬಗ್ಗೆ ನಮೂದು ಇರುತ್ತದೆ ಅಂತಾ ಹೇಳಿರುತ್ತಾರೆ. ಆದರೆ ನಿ.ಪಿ.3 ಮತ್ತು ನಿ.ಡಿ.2 ನ್ನು ಪೂರ್ತಿಯಾಗಿ ಪರಿಶೀಲಿಸಿದಾಗ ಆ.ಸ.ನೌ ರವರು ಮೇಲೆ ಹೇಳಿದ ಸಂಭಾಷಣೆಗೆ ನಂತರ "ಹೌದು" ಎಂದು ಹೇಳಿರುತ್ತಾರೆ. ಅಲ್ಲದೇ ಮುಂದುವರೆದು ದೂರುದಾರರು ಸ್ವಲ್ಪ ಬೇಡಿಕೆ ಇಟ್ಟ ಹಣ ಕಡಿಮೆ ಮಾಡಿ ಮೊದಲು ರೂ.50,000/- ನಾಳೆ ತರುತ್ತೇನೆ ಉಳಿದ ರೂ.30,000/- ನಾಡಿದ್ದು ಕೊಡುತ್ತೇನೆ ಅಂತಾ ನಮೂದು ಇದ್ದು, ಇದಕ್ಕೆ ಆ.ಸ.ನೌ ರವರು "ಆಯಿತು ಆಯಿತು" ಅಂತಾ ಅಂದಿದ್ದು ನಮೂದು ಇರುತ್ತದೆ. ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಎಲ್ಲಾ ವಿಷಯವನ್ನು ಪೂರ್ತಿಯಾಗಿ ಪರಿಶೀಲಿಸಿದಾಗ ಲಂಚದ ಹಣದ ಬೇಡಿಕೆ ಇಟ್ಟ ಬಗ್ಗೆ ಕಂಡುಬರುತ್ತದೆ.

34. ಮುಂದುವರೆದು ಆ.ಸ.ನೌ ರವರ ಪ್ರಕಾರ ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ "ಆಪಾದಿತ ನೌಕರ ಮನೆ ಮೊದಲನೆ ಮಹಡಿಯಲ್ಲಿತ್ತು, ಆ.ಸ.ನೌ ರವರು ಆ ಮನೆಗೆ ಹೋದರು. ನಾನು ಮತ್ತು ರೂಪೇಶ್ ಅವರನ್ನು ಹಿಂಬಾಲಿಸಿ ಆ ಮನೆಗೆ ಹೋದೆವು ಅವರು ಬೆಡ್ ರೂಂಗೆ ಕರೆದುಕೊಂಡು ಹೋದರು". ಮುಂದುವರೆದು "ನಾನು ಹಣ ಕೊಡಲು ಹೋದೆ ಅವರ ಕೈಯಲ್ಲಿ ತೆಗೆಕೊಳ್ಳಲಿಲ್ಲ ಒಂದು ಕಪ್ಪು ಬ್ಯಾಗನ್ನು ತೆರೆದು ಅದರಲ್ಲಿ ಹಣವನ್ನು ಹಾಕಲು ಹೇಳಿದ್ದು, ನಾನು ಬ್ಯಾಗಿನ ಒಳಗೆ ಹಣ ಹಾಕಿದೆ, ಆ ಬ್ಯಾಗನ್ನು ಮಂಚದ ಅಡಿಯಲ್ಲಿ ಬಿಸಾಡಿದರು" ಅಂತಾ ನುಡಿದಿರುತ್ತಾರೆ. ಆದ್ದರಿಂದ ಆ.ಸ.ನೌ ರವರ ವಾದದ ಪ್ರಕಾರ ಆ.ಸ.ನೌ ರವರು ಹಣ ಕೇಳಿರುವುದಿಲ್ಲ, ದೂರುದಾರರೇ ಹಣ ಕೊಡಲು ಹೋಗಿರುತ್ತಾರೆ ಅಂತಾ ವಾದ ಮಂಡಿಸಿರುತ್ತಾರೆ. ಅಲ್ಲದೇ ಆ.ಸ.ನೌ ರವರ ವಾದದ ಪ್ರಕಾರ ನಿ.ಪಿ.6(ಎ) ರಂತೆ ಆ.ಸ.ನೌ ರವರ ಸಮಜಾಯಿಷಿಯನ್ನು ಬರೆದುಕೊಟ್ಟಿದ್ದು, ಅದರಲ್ಲಿ "ನನ್ನ ಬ್ಯಾಗಿನಲ್ಲಿ" ಎಂಬುದನ್ನು ತನಿಖಾಧಿಕಾರಿಗಳು ಒತ್ತಾಯ ಮಾಡಿ ಆ.ಸ.ನೌ ರವರಿಂದ ಬರೆಸಿರುತ್ತಾರೆ ಅಂತಾ ವಾದ ಮಂಡಿಸಿರುತ್ತಾರೆ. ಆದರೆ ನನ್ನ ಅಭಿಪ್ರಾಯದಲ್ಲಿ ಒಂದು ವೇಳೆ ತನಿಖಾಧಿಕಾರಿಗಳು ಒತ್ತಾಯ ಪೂರ್ವಕವಾಗಿ ಬರೆಸಿದ್ದೇ ಆದರೆ ಆ.ಸ.ನೌ ರವರು ತನಿಖಾಧಿಕಾರಿಗಳ ವಿರುದ್ಧ ಯಾವುದೇ ಕ್ರಿಮಿನಲ್ ಮೊಕದ್ದಮೆ ದಾಖಲಿಸ ಬೇಕಾಗಿತ್ತು, ಆದರೆ ದಾಖಲಿಸಿರುವುದಿಲ್ಲ. ಅಲ್ಲದೇ, ತನಿಖಾಧಿಕಾರಿಗಳ ಮೇಲಾಧಿಕಾರಿಗಳಿಗೆ ಈ ರೀತಿ ಒತ್ತಾಯ ಮಾಡಿ ಬರೆಸಿಕೊಂಡಿರುತ್ತಾರೆ ಅಂತಾ ಆ.ಸ.ನೌ ರವರು ದೂರನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಒತ್ತಾಯ ಪೂರ್ವಕವಾಗಿ ಬರೆಸಿರುತ್ತಾರೆ ಅಂತಾ ಅ.ಸ.ನೌ ರವರ ವಾದ ಸಾಬೀತು ಆಗಿರುವುದಿಲ್ಲ.

35. ಮುಂದುವರೆದು ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ರೂಪೇಶ್ ಜೊತೆಗೆ ಆ.ಸ.ನೌ ರವರ ಮನೆಗೆ ಹೋಗಿದ್ದು ಅಂತಾ ಹೇಳಿರುತ್ತಾರೆ. ದೂರುದಾರರು ಜಿಲ್ಲಾ ನ್ಯಾಯಾಲಯದಲ್ಲಿ ತಮ್ಮ ಪಾಟಿಸವಾಲಿನಲ್ಲಿ (ನಿ.ಡಿ.3(ಇ)) ರಂತೆ "ಆರೋಪಿಯು ಮನೆ ಬಳಿಗೆ ಹೋದಾಗ ಚಾ.ಸ–2 ಇವರು ನೆಲ ಅಂತಸ್ತಿನಲ್ಲಿದ್ದರು ಎಂದು ಹೇಳಿರುತ್ತಾರೆ ಎಂದರೆ ಸರಿ ಅಂತಾ ಒಪ್ಪಿಕೊಂಡಿರುತ್ತಾರೆ. ಅಲ್ಲದೇ ರೂಪೇಶ್ ಕಿರಣ್ (ಪಿ.ಡಬ್ಲ್ಯೂ.2) ಇವರು ಈ

B

ವಿಚಾರಣೆಯಲ್ಲಿ ತಮ್ಮ ಪಾಟಿಸವಾಲಿನಲ್ಲಿ ಪ್ಯಾರಾ ನಂ.5ರಲ್ಲಿ ಮೇಲೆ ಹೇಳಿದ ಹಾಗೆ ಒಪ್ಪಿಕೊಂಡಿರುತ್ತಾರೆ. ಮುಂದುವರೆದು ಅದೇ ಪ್ಯಾರಾದಲ್ಲಿ ತನಗೆ ಮನೆಯ ಒಳಗೆ ಏನು ನಡೆಯುತ್ತಿದ್ದ ವಿದ್ಯಮಾನಗಳು ಕಾಣಿಸುತ್ತಿರಲಿಲ್ಲ ಮತ್ತು ಕೇಳಿಸುತ್ತಿರಲಿಲ್ಲ ಎನ್ನುವುದು ಒಪ್ಪಿಕೊಂಡಿರುತ್ತಾರೆ. ಮುಂದುವರೆದು ಇವರು ಆ.ಸ.ನೌ ರವರ ಮನೆಗೆ ಲೋಕಾಯುಕ್ತ ಅಧಿಕಾರಿ ಮತ್ತು ಸಿಬ್ಬಂದಿಯೊಂದಿಗೆ ಹೋಗಿರುತ್ತೇನೆ ಅಂತಾ ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಆ.ಸ.ನೌ ರವರ ಪ್ರಕಾರ ಪಿ.ಡಬ್ಲ್ಯೂ.1 ರವರ ಸಾಕ್ಷಿಯನ್ನು ನಂಬಲು ಅರ್ಹವಿರುವುದಿಲ್ಲ ಎಂದು ವಾದ ಇರುತ್ತದೆ. ಆದರೆ ಆ.ಸ.ನೌ ರವರು ಈ ವಿಚಾರಣೆಯಲ್ಲಿ ತಮ್ಮ ಲಿಖಿತ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ದಿನಾಂಕ: 13/06/2014 ರಂದು ಮಧ್ಯಾಹ್ನ ಇವರು ಮನೆಯಲ್ಲಿದ್ದಾಗ ದೂರುದಾರರು ಮತ್ತೊಬ್ಬ ವ್ಯಕ್ತಿಯೊಂದಿಗೆ ಇವರ ಮನೆಗೆ ಬಂದಿದ್ದು, ದೂರುದಾರರೊಂದಿಗೆ ಮಾತನಾಡುತ್ತಿದ್ದಾಗ ದೂರುದಾರರು ಕುಡಿಯಲು ನೀರು ಕೇಳಿದ ಕಾರಣ ಆಪಾದಿತರು ಮನೆ ಒಳಗೆ ಹೋದಾಗ ದೂರುದಾರರು ಇವರಿಗೆ ಗೊತ್ತಾಗದಂತೆ, ದೂರುದಾರರು ತಂದಿದ್ದ ಹಣದ ಬ್ಯಾಗನ್ನು ಇಟ್ಟು, ಕೂಡಲೇ ಅಲ್ಲಿಯೇ ಬಾಗಿಲು ಬಳಿ ಇದ್ದ ತನಿಖಾಧಿಕಾರಿಗಳನ್ನು ಒಳಗೆ ಕರೆದು ಸುಳ್ಳು ಟ್ರಾಪ್ ಬಲೆಯಲ್ಲಿ ಸಿಲುಕಿಸಿರುತ್ತಾರೆ ಅಂತಾ ಹೇಳಿರುತ್ತಾರೆ. ಆದರೆ ಪಿ.ಡಬ್ಲ್ಯೂ.2 ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಮೇಲಿನ ಹಾಗೆ ಹೇಳಿರುವುದಿಲ್ಲ. ಒಂದು ವೇಳೆ ಆ.ಸ.ನೌ ರವರು ಹೇಳಿದ ಹಾಗೆ ನಡೆದಿದ್ದೇ ಆದರೆ ರೂಪೇಶ್ ಕಿರಣ್ ರವರು ಈ ರೀತಿ ತಮ್ಮ ಮುಖ್ಯ ವಿಚಾರಣೆಯಲ್ಲಿ ರಕ್ಷಣಾ ಹೇಳಿಕೆಯಲ್ಲಿ ಹೇಳಿದ ಹಾಗೆ ನುಡಿಯಬೇಕಾಗಿತ್ತು, ಆದರೆ ನುಡಿದಿರುವುದಿಲ್ಲ. ಆದರೆ ಆ.ಸ.ನೌ ರವರು ರೂಪೇಶ್ ಕಿರಣ ಇವರು ಜಿಲ್ಲಾ ನ್ಯಾಯಾಲಯದಲ್ಲಿ ನುಡಿದ ಸಾಕ್ಷಿಯ ಪ್ರತಿಯನ್ನು ಸಲ್ಲಿಸಿರುವುದಿಲ್ಲ.

36. ಮುಂದುವರೆದು ಆ.ಸ.ನೌ ರವರ ಪ್ರಕಾರ ಶಿಸ್ತು ಪ್ರಾಧಿಕಾರದ 3ನೇ ಸಾಕ್ಷಿ ತನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂ.7ರ 5ನೇ ಸಾಲಿನಲ್ಲಿ "ನಂತರ ಹಣದ ಬಗ್ಗೆ ವಿಚಾರಿಸಿದಾಗ ಆ.ಸ.ನೌ ರವರು ಮಂಚದ ಅಡಿಯಲ್ಲಿ ಇಟ್ಟಿದ್ದ ಕಪ್ಪು ಬಣ್ಣದ ಬ್ಯಾಗನ್ನು ತೆಗೆದು, ಅದರಲ್ಲಿದ್ದ ರೂ.50,000/- ಹಣವನ್ನು ನನಗೆ ತೋರಿಸಿರುತ್ತಾರೆ" ಅಂತಾ ನುಡಿದಿರುತ್ತಾರೆ. ಈ

ಹೇಳಿಕೆಯಿಂದ ಕಪ್ಪು ಬಣ್ಣದ ಬ್ಯಾಗ್ ಮಂಚದ ಕೆಳಗೆ ಇರುತ್ತದೆ ಅಂತಾ ಕಂಡುಬರುತ್ತದೆ. ನಿ.ಪಿ.7 ತನಿಖಾಧಿಕಾರಿಗಳು ಸ್ಥಳದಲ್ಲಿ ತಯಾರಿಸಿದ ನಕ್ಷೆಯಲ್ಲಿ ಮಂಚ ಇರುವುದಿಲ್ಲ. ಆದರೆ ಇಂಜಿನಿಯರ್ ರವರಿಂದ ತಯಾರಿಸಿದ ನಿ.ಪಿ.12 ರಲ್ಲಿ ತೋರಿಸುವಂತೆ ಆ.ಸ.ನೌ ರವರ ಮನೆಯ ಬಾಗಿಲಿನಿಂದ 2ನೇ ಬೆಡ್ ರೂಂನಲ್ಲಿ ದೂರುದಾರ, ಆ.ಸ.ನೌ ಇರುವುದನ್ನು ತೋರಿಸಿದ್ದು, ಇದರಲ್ಲಿ ಮಂಚವನ್ನು ತೋರಿಸಿರುತ್ತಾರೆ. ಎರಡೂ ನಕ್ಷೆಗಳು ಒಂದೇ ದಿನ ಒಂದೇ ಸಮಯದಲ್ಲಿ ತಯಾರಿಸಿರುತ್ತಾರೆ. ಆದ್ದರಿಂದ ಇಂಜಿನಿಯರ್ ಇವರ ನಕ್ಷೆಯಲ್ಲಿ ತನಿಖಾಧಿಕಾರಿಗಳ ಸೂಚನೆ ಮೇರೆಗೆ ಮಂಚ ತೋರಿಸುವ ಸಾಧ್ಯತೆ ಇರುತ್ತದೆ ಅಂತಾ ವಾದ ಮಂಡಿಸಿರುತ್ತಾರೆ. ಆದರೆ ಆ.ಸ.ನೌ ರವರ ಪರ ವಕೀಲರು ಪಿ.ಡಬ್ಲ್ಯೂ.1 ಇವರ ಪಾಟಿಸವಾಲಿನಲ್ಲಿ ಪ್ಯಾರಾ ನಂ.21 ರಲ್ಲಿ ಕೊನೆಯ ಸಾಲಿನಲ್ಲಿ "ನಾನು ಅವರ ಮನೆಯಲ್ಲಿ ನೀರು ಕೇಳಿದಾಗ, ಅವರು ನೀರು ತರಲು ಒಳಗೆ ಹೋದಾಗ ನಾನು ಆ ಕಪ್ಪು ಬ್ಯಾಗನ್ನು ರೂಮಿನ ಮಂಚದ ಕೆಳಗೆ ಎಸದಿದ್ದೆ" ಎಂದು ಮಾಡಿದ ಸಲಹೆಗೆ ಪಿ.ಡಬ್ಲ್ಯೂ.1 ಇವರು ಒಪ್ಪಿಕೊಂಡಿರುವುದಿಲ್ಲ. ಆ.ಸ.ನೌ ರವರೇ ಅಲ್ಲಿ ಮಂಚ ಇತ್ತು ಅಂತಾ ಸಲಹೆ ಮಾಡಿದ್ದು ಇರುವುದರಿಂದ ಮೇಲೆ ಹೇಳಿದಂತೆ ಆ.ಸ.ನೌ ರವರ ವಾದ ಒಪ್ಪಲು ಸಾಧ್ಯವಿರುವುದಿಲ್ಲ.

37. ಆ.ಸ.ನೌ ರವರ ಇನ್ನೊಂದು ವಾದವೇನೆಂದರೆ ಟ್ರಾಪ್ ಕಾರ್ಯಚರಣೆ ನಡೆದಿರುವುದು ದಿನಾಂಕ: 13/06/2014 ರಂದು ಮಾದರಿ ಧ್ವನಿ ಮುದ್ರಣ ದಿನಾಂಕ: 18/06/2015 ರಂದು ಪಡೆದಿರುತ್ತಾರೆ. ಅಂದರೆ ಟ್ರಾಪ್ ಕಾರ್ಯಾಚರಣೆಯಾದ ಸುಮಾರು 1 ವರ್ಷದ ನಂತರ ಆ.ಸ.ನೌ ರವರ ಮಾದರಿ ಧ್ವನಿ ಮುದ್ರಿಕೆಯನ್ನು ಮಾಡಿಕೊಂಡಿರುತ್ತಾರೆ. ಯಾಕೆ ಈ ವಿಳಂಬದ ಬಗ್ಗೆ ತನಿಖಾಧಿಕಾರಿಗಳು ಏನು ಹೇಳಿರುವುದಿಲ್ಲವೆಂದು ಹೇಳಿರುತ್ತಾರೆ. ಅದರಂತೆ ನಿ.ಪಿ.15 ರಾಸಾಯನಿಕ ತಜ್ಞರ ವರದಿ ಪ್ರಕಾರ ನಿ.ಪಿ.15 ರ ಟ್ರಾಪ್ ಸಮಯದಲ್ಲಿ ಆದಂತಹ ವಾಯ್ಸ್ ರೆಕಾರ್ಡ್/ಸಿ.ಡಿ ಯನ್ನು ಕಳುಹಿಸಿರುವುದಿಲ್ಲ ಅಂತಾ ವಾದ ಇರುತ್ತದೆ. ಆದರೆ ಟ್ರಾಪ್ ಪಂಚನಾಮೆ (ನಿ.ಪಿ.4) ನ್ನು ಪರಿಶೀಲಿಸಿದಾಗ ವಾಯ್ಸ್ ರೆಕಾರ್ಡ್‌ರ್‌ನಲ್ಲಿರುವ ಧ್ವನಿ ಮುದ್ರಿಕೆಯನ್ನು ಲ್ಯಾಪ್‌ಟಾಪ್‌ನಲ್ಲಿ ಉಳಿಸಿಕೊಂಡು ಸದರಿ ಸಂಭಾಷಣೆಯ 3 ಸಿ.ಡಿ.ಯಲ್ಲಿ ಪ್ರತಿ

ತಯಾರಿಸಿ ಅದರಲ್ಲಿ ಒಂದು ಸಿ.ಡಿ.ಯನ್ನು ಆ.ಸ.ನೌ ರವರಿಗೆ ನೀಡಿದ್ದು, ಇನ್ನೊಂದು ಸಿ.ಡಿ.ಯನ್ನು ತನಿಖೆಗೆ ಇಟ್ಟುಕೊಂಡಿದ್ದು, ಉಳಿದ ಸಿ.ಡಿ.ಯನ್ನು ಒಂದು ಕವರ್‌ನಲ್ಲಿ ಹಾಕಿ ಸೀಲು ಮಾಡಿದ್ದು, ಅದು ಆರ್ಟಿಕಲ್ ನಂ.5 ಎಂದು ನಮೂದು ಇರುತ್ತದೆ. ಅಲ್ಲದೇ ನಿ.ಪಿ.4 ರಲ್ಲಿ ಟ್ರಾಪ್ ಪೂರ್ವದಲ್ಲಿದ್ದ ದೂರುದಾರ ಮತ್ತು ಆ.ಸ.ನೌ ರವರ ಮೊಬೈಲ್ ಫೋನಿನಲ್ಲಿ ಮಾತನಾಡಿದ ಧ್ವನಿ ಮುದ್ರಿಕೆಯ ಸಂಭಾಷಣೆಯನ್ನು 3 ಸಿ.ಡಿ.ಯಲ್ಲಿ ಪ್ರತಿ ಮಾಡಿಸಿ ಒಂದು ಸಿ.ಡಿ.ಯನ್ನು ಆ.ಸ.ನೌ ರವರಿಗೆ, ಇನ್ನೊಂದು ಸಿ.ಡಿ.ಯನ್ನು ತನಿಖೆಗಾಗಿ ಇಟ್ಟುಕೊಂಡಿದ್ದು, ಮೂಲ ಸಿ.ಡಿ.ಯನ್ನು ಸೀಲು ಮಾಡಿ ಆರ್ಟಿಕಲ್–6 ಎಂದು ಗುರುತಿಸಲಾಯಿತು ಅಂತಾ ನಮೂದು ಇರುತ್ತದೆ. ನಿ.ಪಿ.15 ನ್ನು ಪರಿಶೀಲಿಸಿದಾಗ ಆರ್ಟಿಕಲ್–5 ಮತ್ತು 6 ಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟಿದ್ದು ಇರುತ್ತದೆ ಅಂತಾ ನಮೂದು ಇರುತ್ತದೆ. ಆದ್ದರಿಂದ ವಾಯ್ಸ್ ರೆಕಾರ್ಡರ್‌ನಲ್ಲಿ ಆದ ಧ್ವನಿ ಮುದ್ರಿಕೆಯ ಸಂಭಾಷಣೆಯನ್ನು ಕಳುಹಿಸಿ ಕೊಟ್ಟಿರುವುದಿಲ್ಲ ಎನ್ನುವುದು ಆ.ಸ.ನೌ ರವರ ವಾದ ಒಪ್ಪಲು ಸಾಧ್ಯವಿಲ್ಲ.

38. ನಿ.ಪಿ.15 ಇದು ಎಫ್.ಎಸ್.ಎಲ್ ವರದಿ ಇದ್ದು, ರಾಸಾಯನಿಕ ತಜ್ಞರ ಅಭಿಪ್ರಾಯದ ಪ್ರಕಾರ "The respective speeches said to be of speaker 1 Chethan S. Kolavi recorded in CD marked as Article No.6 and samples speeches recorded in CD marked as Article No.7 are similar" ಅಂತಾ ನಮೂದು ಇರುತ್ತದೆ. ಅಲ್ಲದೇ ಆರ್ಟಿಕಲ್–5 ಮತ್ತು 6 ರ ಒಂದು ಪ್ರತಿಯನ್ನು ಆ.ಸ.ನೌ ರವರಿಗೆ ಪಂಚನಾಮೆ ವೇಳೆಯಲ್ಲಿ ನೀಡಿದ್ದರಿಂದ ನನ್ನ ಅಭಿಪ್ರಾಯದಲ್ಲಿ ಇವುಗಳನ್ನು ಸೃಷ್ಟಿ ಮಾಡಲಾಗಿದೆ ಎಂದು ಆ.ಸ.ನೌ ರವರು ಮಾಡಿದ ವಾದ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ ನನ್ನ ಅಭಿಪ್ರಾಯಲ್ಲಿ ಎಲ್ಲಾ ಸಾಕ್ಷ್ಯ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ ಆ.ಸ.ನೌ ರವರು ಲಂಚದ ಹಣದ ಬೇಡಿಕೆ ಇಟ್ಟಿದ್ದು ಕಂಡುಬಂದಿದ್ದು ಅಲ್ಲದೇ ಅವರು ಈ ಹಣವನ್ನು ತಮ್ಮ ಮನೆಯಲ್ಲಿ ಸ್ವೀಕರಿಸಿದ್ದು ಕಂಡುಬರುತ್ತದೆ. ಆದ್ದರಿಂದ, ಮಂಡನಾಧಿಕಾರಿಗಳು ಶಿಸ್ತು ಪ್ರಾಧಿಕಾರದ ಪರವಾಗಿ ಅಂಶ–1ನ್ನು ಸಾಬೀತುಪಡಿಸಿರುತ್ತಾರೆ.

8

39. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ ರವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸುವಲ್ಲಿ ಸಫಲವಾಗಿರುತ್ತದೆ ಎನ್ನುವ ನಿರ್ಣಯಕ್ಕೆ ಬಂದು ಅಂಶ-1ನ್ನು ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

40. **ಅಂಶ-2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಆ.ಸ.ನೌಕರ **ಶ್ರೀ. ಚೇತನ್ ಎಸ್. ಕೊಳವಿ,** ಹಿಂದಿನ ಮುಖ್ಯಾಧಿಕಾರಿ, ಪುರಸಭೆ, ಉಲ್ಲಾಳ, ಹಾಲಿ ಮುಖ್ಯಾಧಿಕಾರಿ ಗ್ರೇಡ್-2, ಪುರಸಭೆ, ಜಿಗಣಿ ಇವರ ವಿರುದ್ಧ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ಸಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

ಆ.ಸ.ನೌ ರವರ ನಿವೃತ್ತಿ ದಿನಾಂಕ: 28/02/2040 ಆಗಿರುತ್ತದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

21/11/22

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

# ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. Guruprakash P S/o Late Thimmappa Shetty, Ashoknagar, Mangaluru. |
| | **PW-2** | Sri. Roopesh Kiran S/o U Babu, Accounts Suptd., Zilla Panchayath, Mangaluru. |
| | **PW-3** | Sri. Naveenchandra Jogi S/o Late Vasudev Jogi, CPI, Sulia, D.K. |
| 2 | **Documents marked on behalf of the Disciplinary Authority Ex.P-1 to Ex.P-31** | |
| | **Ex.P.1 & 1(a)** | Complaint dtd: 13/06/2014 submitted to Police Inspector, KLA, Mangaluru with signature. |
| | **Ex.P.2** | List of currency notes with signature. |
| | **Ex.P.3 & 3(a)** | Mahazar with signature. |
| | **Ex.P.4& 4(a)** | Mahazar with signature. |
| | **Ex.P.5** | Photographs. |
| | **Ex.P.6, 6(a) & 6(b)** | Documents with signatures. |
| | **Ex.P.7** | Sketch map. |
| | **Ex.P.8 & 8(a)** | FIR with Signature. |
| | **Ex.P.9** | Letter dtd: 13/06/2014 addressed to EE, D.K Panchayath Raj Engineering Divisin, Mangaluru. |
| | **Ex.P. 10** | Letter dtd: 13/06/2014 addressed to CEO, ZP, Mangaluru. |

| | | |
|---|---|---|
| | **Ex.P. 11** | Letter dtd: 13/06/2014 addressed to EE, MESCOM, Mangaluru. |
| | **Ex.P. 12** | Sketch map. |
| | **Ex.P. 13** | Chemical Test Report. |
| | **Ex.P. 14** | CDR. |
| | **Ex.P. 15** | Voice print report. |
| | **Ex.P. 16** | Mahazar. |
| | **Ex.P. 17** | Office order dtd: 15/06/2014 of EE, MESCOM, Mangaluru. |
| **3** | **Documents marked on behalf of the DGOs through the complainant** | |
| | **Ex.D.1** | Running bill/final bill. |
| | **Ex.D.2** | Conversation details. |
| | **Ex.D.3, 3(a), 3(b), 3(c), 3(d) & 3(e)** | Spl. Case No.135/2015 with marked portion. |

Dated this the 21st November, 2022

21/11/22

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.